ಅಪರಂಜಿ

ನವೆಂಬರ್ 2002

ತಿಳಿನಗೆಯ ಕಾರಂಜಿ



ಪ್ರಕಾಶ್

ಬೇಲೂರು ರಾಮಮೂರ್ತಿ

ಕುಮುದಾ ಪುರುಷೋತ್ತಮ್

ಶೋಭಾ ಪ್ರಮೋದ್

ಇಸ್ಮಾಯಿಲ್

ಭಕ್ತ

ಇಂದಿರಾ ಮೂರ್ತಿ

ಹಾಸ್ಯಪ್ರಿಯ

ಶಿವು

ಬಿ. ನಾಗೇಂದ್ರ

ಹೆಚ್. ಗೋಪಾಲಕೃಷ್ಣ

ಗೋಪಾಲಿ

ಎಸ್ಸಾರ್ಮೂರ್ತಿ

ಬಿಡಿ ಪ್ರತಿ: ರೂ. 5.00

ಸ್ಥಾಪನೆ : 1990

ವಾಸವಿ ಕ್ರೆಡಿಟ್
ಕೋ-ಆಪರೇಟಿವ್ ಸೊಸೈಟಿ ನಿಯಮಿತ

ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಆವರಣ, 8ನೇ ಕ್ರಾಸ್
ಮಲ್ಲೇಶ್ವರಂ, ಬೆಂಗಳೂರು-560 003. ದೂರವಾಣಿ : 3447014
ಶಾಖೆ : ನಂ 4, ಸಂಜಯನಗರ ಮುಖ್ಯ ರಸ್ತೆ, ಎನ್.ಜಿ.ಇ.ಎಫ್. ಬಡಾವಣೆ
ಬೆಂಗಳೂರು-560 094. ದೂರವಾಣಿ : 3419780

ಬೆಂಗಳೂರು ನಗರದಲ್ಲಿ ತ್ವರಿತಗತಿಯಲ್ಲಿ ಬೆಳೆಯುತ್ತಿರುವ ಸಹಕಾರಿ ಸಂಸ್ಥೆ

ನಿಮ್ಮ ಶುಭೋದಯಕ್ಕೆ - ನಮ್ಮ ಯೋಜನೆಗಳು

ಭಾಗೀರಥಿ

ಗೌರಿಹಬ್ಬ, ಗರುಡ ಪಂಚಮಿ, ಯುಗಾದಿ ಹಬ್ಬದ ಸಂದರ್ಭದಲ್ಲಿ ನಿಮ್ಮ ಹೆಣ್ಣು ಮಕ್ಕಳಿಗೆ ನಿಮ್ಮ ಪರವಾಗಿ ಮಂಗಳದ್ರವ್ಯಗಳಾಗಿ ಆಜೀವ ಪರ್ಯಂತ ಹಣವನ್ನು ಕಳುಹಿಸಿ ಕೊಡುವ ಯೋಜನೆ.

ನೀವು ವಿನಿಯೋಗಿಸಬೇಕಾದ ಕನಿಷ್ಠ ಮೊತ್ತ ರೂ **600-00** ಮಾತ್ರ.

ಜ್ಞಾನ ಜ್ಯೋತಿ ಠೇವಣಿ

ಇಂದು ನೀವು ತೊಡಗಿಸುವ 8,000 ರೂಪಾಯಿಗಳು 20 ವರ್ಷಗಳಲ್ಲಿ **1,35,000** ರೂಪಾಯಿಗಳಾಗಿರುತ್ತದೆ.

ನಗದು ಪತ್ರ

ಕೇವಲ 5 ವರ್ಷಗಳಲ್ಲಿ ನಿಮ್ಮ ಹಣ ದ್ವಿಗುಣಗೊಳ್ಳುತ್ತದೆ.

ನಿಮ್ಮ ನಿಶ್ಚಿತ ಠೇವಣಿಗಳ ಮೇಲೆ ಶೇ 15ರಷ್ಟು ಆದಾಯ.

ನಿಮ್ಮ ಕಷ್ಟಾರ್ಜಿತ ಹಣ ನಮ್ಮಲ್ಲಿ ತೊಡಗಿಸಿ, ನಿಶ್ಚಿಂತೆಯ ಜೀವನ ಸಾಗಿಸಿ.

ಹೆಚ್ಚಿನ ವಿವರಗಳಿಗೆ ಕಛೇರಿಯಲ್ಲಿ ಸಂಪರ್ಕಿಸಿ.

ರಾ.ಪ. ರವಿಶಂಕರ್	**ಎ.ಆರ್. ಅರುಣ್ ಕುಮಾರ್**	**ಎನ್. ಪಾರ್ವತಿ**
ಅಧ್ಯಕ್ಷರು	**ಉಪಾಧ್ಯಕ್ಷರು**	**ಕಾರ್ಯದರ್ಶಿ**

ನಿರ್ದೇಶಕರುಗಳು

ಬಿ.ಎಸ್. ಗೋಪಿನಾಥ್ □ ಡಾ|| ಪಿ. ಎನ್. ಗೋವಿಂದರಾಜುಲು □ ವೈ. ವಿ. ಶಾಂತಮೂರ್ತಿ
ಕೆ.ವಿ. ಸುರೇಶ್ ಕುಮಾರ್ □ ಸಿ. ಎಸ್. ನಾಗೇಶ್ವರ ರಾವ್ □ ಬಿ. ಕೃಷ್ಣಮೂರ್ತಿ
ಎಸ್. ಸತೀಶ್ □ ಶ್ರೀಮತಿ ಕೆ. ಎಂ. ವಿಶಾಲಾಕ್ಷಿ □ ಹೆಚ್. ಬಿ. ಪ್ರಸಾದ್ □ ವಿ.ಎ. ಅಶ್ವಥ್



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500
Ph: 3345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 20 ನವೆಂಬರ್ - 2002 ಸಂಚಿಕೆ - 2

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



○ ಪ್ರಕಾಶ್

'ದ್ವೀಪ' ಚಿತ್ರದಿಂದ ಕನ್ನಡದ ಸೌಂದರ್ಯವನ್ನು ಬೆಳಗಿದ ಕಾಸರವಳ್ಳಿಯವರಿಗೆ ಅಪರಂಜಿಯ ಅಭಿನಂದನೆಗಳು!!

★★★

ಭದ್ರಾವತಿ: ಮನೆ ದರೋಡೆ
- ಸುದ್ದಿ

ಭದ್ರ!!

★★★

ಸಜ್ಜನಿಕೆಯ ಹೊಸಿಲು ದಾಟಿದ ಜಯಾ
- ಪತ್ರಿಕೆ

ಅವರು ಯಾವ ಕಡೆಯಿಂದ ದಾಟಿದರು??!

★★★

ನಾಟಕ ಅಕಾಡೆಮಿಯಲ್ಲಿ ಮಾರಾಮಾರಿ
- ಸುದ್ದಿ

'ಅಖಾಡ'ಮಿ ಅನ್ನಬಹುದು ಈಗ!!

★★★

ಆಸ್ಪತ್ರೆಗೆ ಲೋಕಾಯುಕ್ತ ಭೇಟಿ
- ಪತ್ರಿಕೆ

ಡಾಕ್ಟರುಗಳಿಗೆ ಚಳಿ ಬಂದಿರಬೇಕು!!

★★★

ಕರ್ನಾಟಕದಲ್ಲಿ ರಾಷ್ಟ್ರಪತಿ ಆಳ್ವಿಕೆಯ ಜಯಾ ಮನವಿ ಪರಿಶೀಲನೆ: ಬಿ.ಜೆ.ಪಿ.
- ಸುದ್ದಿ

ಹಾಗಲಕಾಯಿಗೆ..........!!

★★★

ಜಯಲಲಿತ ಅವರು ವರುಣ ದೇವನ ಮೇಲೆ ಸುಪ್ರೀಂ ಕೋರ್ಟಿಗೆ ಕೇಸ್ ಹಾಕುತ್ತಾರಂತೆ!!

★★★

ಕಾವೇರಿ ಪೂಜೆಯಲ್ಲಿ ರಾಜಕೀಯ ಇಲ್ಲ

- ಮಾಜಿ ಪ್ರಧಾನಿ

'ರಾಜಕೀಯ ಪೂಜೆ' ಅಂತ ಬೇರೆ ಇರುತ್ತೇನು??


★★★

ಜಯಾ ಬಂದರೆ ರತ್ನಗಂಬಳಿ ಸ್ವಾಗತ

- ಅಂಬರೀಷ್

ಆದರೆ, ಅದನ್ನ ಎಳೆಯುವುದೂ ಕಷ್ಟ!!

★★★



ನೀರೆ... ನೀರೆ ಬೆಂಕಿಯಾದ ನೀರೆ

ಒಬ್ರು ಬಿಡಿ ಅಂತಾರೆ, ಇನ್ನೊಬ್ರು ಬಿಡಲ್ಲ ಅಂತಾರೆ. ಮತ್ತೊಬ್ಳು ಬಿಟ್ರೆ ಓಡೋಗ್ತೀನಿ ಅಂತಾಳೆ. ಅದ್ಯಾಗೆ ಹೋಗ್ತೀಯ ನಾವೂ ನೋಡ್ತೀವಿ ಅಂತಾರೆ. ಇದೆಲ್ಲ ನಿಮಗೂ ಗೊತ್ತಿದೆಯಲ್ವ, ಅದೇ ಸ್ವಾಮಿ ಕಾವೇರಿ ಗಲಾಟೆ... ಯಾಕಾದ್ರೂ ಆ ನಾರಿಗೆ ಕಾವೇರಿ ಅಂತ ಹೆಸರಿಟ್ರೋ ಈಗ ನೋಡಿ ವಿಷಯಕ್ಕೆ ಕಾವೇರಿ, ಕಾವೇರಿ ಇದರ ಪರಿಹಾರಕ್ಕೆ ಯಾವ 'ವೇ' ರೀ ಅಂತ ಕೇಳೋ ಹಾಗಾಗಿದೆ.

ನದಿ ಹುಟ್ಟೋದು ತಪ್ಪಲ್ಲ, ಹರಿಯೋದು ತಪ್ಪಲ್ಲ, ಸಮುದ್ರ ಸೇರೋದು ತಪ್ಪಲ್ಲ, ಆದರೆ ಅದು ಯಾವ್ಯಾವ ಊರು, ದೇಶದಲ್ಲಿ ಹರಿಯುತ್ತೋ ಅಲ್ಲಿ ಅದನ್ನ ಹಂಚ್ಕೊಳಕ್ಕೆ ಜಗಳ ಆಡ್ತಾರೆ. ಕೆರೆನೀರಿಗೆ, ಹೊಳೆ ನೀರಿಗೆ ಡೊಣೆ ನಾಯಕನ ಅಪ್ಪಣೆಯೇ ಅನ್ನೋ ಗಾದೆ ಮಾತು ನಿಜವಾಗ್ತಿದೆಯಲ್ಲ.

ಎಲ್ಲೋ ಒಂದು ಮೂಲೇಲಿ ಕೂತ್ಕೊಂಡು ನಿಮ್ಹತ್ರ ಇಷ್ಟು ನೀರಿದೆ. ಇಷ್ಟನ್ನು ಅವರಿಗೆ ಕೊಡಿ ಅನ್ನೋದು ಯಾವ ನ್ಯಾಯ? ಆದರೆ ಅದೇ ನ್ಯಾಯ ಆಗಿಬಿಟ್ಟಿದೆ. ನೀರು ಬಿಟ್ರೆ ಏನಾಗುತ್ತೆ ಅಂದ್ರೆ ಹರಿದುಹೋಗುತ್ತೆ ಆದ್ರೆ ಈಗ ಬರೀ ನೀರು ಮಾತ್ರ ಹರಿಯಲ್ಲ, ತಲೆಗಳು ಉರುಳುತ್ವೆ, ರಕ್ತ ಹರಿಯುತ್ತೆ, ಜನರ ನಡುವೆ ವೈಮನಸ್ಯ ಬೆಳೆಯುತ್ತೆ. ಒಂದು ನಾಡಿನ ಸಮಸ್ಯೆ ಅದರಲ್ಲೂ ನೀರು ಹಂಚಿಕೆಯಂಥ ಸಮಸ್ಯೆ ಅಂದ್ರೆ ಅದೇನು ಸುಮ್ನೇನೇ.

ನಿಮಗಿರ್ಲಿ ಬಿಡ್ಲಿ ನಮಗೆ ನೀರು ಬಿಡಿ, ನಮ್ಮ ಬೆಳೆ ಹಾಳಾಗ್ತಿದೆ ಅನ್ನೋ ತಮಿಳುನಾಡಿನ ಆಕ್ರಂದನದಲ್ಲಿ ಅರ್ಥವಿದೆಯೇ? ಅರ್ಥ ತಾತ್ಪರ್ಯಗಳನ್ನು ಕೇಳ್ತಾ ಕೂರೋ ಕಾಲ ಅಲ್ಲ ಇದು. ತಲೆಗೆ ಸ್ವಲ್ಪ ಕೆಲಸ ಕೊಡಬೇಕು. ವಿವೇಚನೆಯಿಂದ ಕೆಲಸ ಮಾಡಬೇಕು. ಸರ್ವೇ ಜನಾಃ ಸುಖಿನೋ ಭವಂತು ಅನ್ನುವ ವಾಣಿ ನಿಜವಾಗಿ ಕಾರ್ಯಗತವಾಗಬೇಕು ಆದರೆ ವಿವೇಚನೆಯಿಂದ ಕೆಲಸ ಮಾಡೋರ್‍ಯಾರು... ಎಲ್ಲರೂ ಅವರವರ ತಲೆತಿರುಗಿದ ಹಾಗೆ ಕೆಲಸ ಮಾಡ್ತಾರೆ.

ನೀರು ಬಿಟ್ಟರೆ ನೋಡಿ ಅಂಥ ನಮ್ಮ ಜನ ಸರ್ಕಾರಕ್ಕೆ ಎಚ್ಚರಿಕೆ ಕೊಡ್ತಾ ನಮ್ಮ ರೈಲು, ಬಸ್ಸು ಇವುಗಳನ್ನು ಸುಡ್ತಾ ನಮಗೆ ನಾವೇ ಹಾಳುಮಾಡ್ಕೊತಾ ಇದೀವಿ ಆದರೆ ನೆರೆ ರಾಜ್ಯದಲ್ಲಿ ಹೀಗೆ ಯಾವ ಗಲಾಟೆಯೂ ಆಗಲ್ಲ ಅಲ್ಲಿ

ಯಾರೂ ರೈಲು ಬಸ್ಸಿಗೆ ಬೆಂಕಿ ಹಾಕಿಲ್ಲ. ನಾವು ಮಾಡುತ್ತಿರುವ ಕೆಲಸ ಉರಿಯುವ ಗಾಯಕ್ಕೆ ಉಪ್ಪು ತುಂಬಿದ ಹಾಗೇ.

ಕೃಷ್ಣ ಅಂತಾರೆ ಜೈಲಿಗೆ ಬೇಕಾದರೂ ಹೋದೇನು ಆದರೆ ತಮಿಳುನಾಡಿಗೆ ನೀರು ಬಿಡೋ ಪ್ರಶ್ನೆಯೇ ಇಲ್ಲ ಅಂತ. ಯಾಕೋ ಕೃಷ್ಣರಿಗೆ ಕೃಷ್ಣನ ಜನ್ಮಸ್ಥಾನದ ನೆನಪಾಗಿರಬೇಕು ಪಾಪ ಅವರಿಗೆ ತಾನೇ ನೆಮ್ಮದಿ ಇದೆಯೇ ಅಧಿಕಾರಕ್ಕೆ ಬಂದಾಗಿನಿಂದ ಒಂದಲ್ಲ ಒಂದು ಸಮಸ್ಯೆ ಅವರನ್ನ ಕಾಡುತ್ತಲೇ ಇದೆ. ರಾಜಕುಮಾರ್ ಅಪಹರಣದ ಸಮಸ್ಯೆಯೇ ಅವರಿಗೆ ಸಾಕಾಯ್ತು. ಅದು ಮುಗೀತು ಅಂದ್ಕೊಕ್ತಾ ಇದ್ದ ಹಾಗೆ ಕಾವೇರಿ ಸಮಸ್ಯೆ ಅದು ಇನ್ನು ಇರುವಾಗಲೇ ನಾಗಪ್ಪನವರ ಅಪಹರಣ ಒಂದೇ ಎರಡೇ ಪಾಪ ಅವರಿಗೂ ನೆಮ್ಮದಿ ಬೇಡವೇ. ಪ್ರಸ್ತುತ ಸನ್ನಿವೇಶದಲ್ಲಿ ನೆಮ್ಮದಿ ಅಂದರೆ ಅದು ಜೈಲಲ್ಲೇ ಅನಿಸಿರಬೇಕು. ಜೈಲು ಅಂದ್ರೆ, ಅವರನ್ನ ಹೇಗಂದ್ರೆ, ಹಾಗೆ ತಗೊಂಡು ಹೋಗಿ ಹಾಕಿಬಿಡೋಕೆ ಆಗುತ್ಯೇ ಅವರಿಗೊಂದು ಪ್ರತ್ಯೇಕ ಸೆಲ್ ರೆಡಿ ಮಾಡಬೇಕೇ... ಕೃಷ್ಣ ಜೈಲಿಗೆ ಹೋದರೆ ಸಮಸ್ಯೆ ಪರಿಹಾರವಾದೀತೇ. ಕೃಷ್ಣ ಹುಟ್ಟಿದಾಗ ಸಿಕ್ಕಾಪಟ್ಟೆ ಮಳೆ ಬಂದು ಯಮುನಾ ನದಿಯಲ್ಲಿ ಪ್ರವಾಹವೂ ಬಂದಿತ್ತಂತೆ ಹಾಗೇ ಈ ಕೃಷ್ಣ ಜೈಲಿಗೆ ಹೋದರೆ ಇದ್ದಕ್ಕಿದ್ದಂತೆ ಮಳೆರಾಯನ ಕೃಪೆಯಾಗಿ ಪ್ರವಾಹ ಬರಬಹುದೇ!

ಕೃಷ್ಣ ಜೈಲಿಗೆ ಹೋದರೆ ಅಧಿಕಾರ ಕಳ್ಕೊಂಡು ಹೋಗ್ತಾರೋ ಅಥವಾ ಹಾಗೇ ಹೋಗ್ತಾರೋ ಅಥವಾ ಜೈಲಿಗೆ ಹೋದದ್ದಕ್ಕೆ ಅಧಿಕಾರ ಕಳ್ಕೊತಾರೋ ಗೊತ್ತಿಲ್ಲ ಆದರೆ ಒಂದು ವೇಳೆ ಕೃಷ್ಣ ಹೇಳಿದಂತೆ ಅವರು ಜೈಲಿಗೆ ಹೋದದ್ದೇ ಆದರೆ ಮುಖ್ಯಮಂತ್ರಿ ಕುರ್ಚೀಲಿ ಯಾರನ್ನ ಕೂರಿಸಬೇಕು ಅನ್ನೋ ಪ್ರಶ್ನೆನೇ ಇಲ್ಲ ಯಾಕೇಂದ್ರೆ ಈಗಾಗ್ಲೇ ನಾನು ನಾನು ಅಂತ ಪೈಪೋಟಿ ಷುರುವಾಗಿರುತ್ತೆ. ನಾನು ಬರೋ ತನಕ ಕುರ್ಚಿ ನೋಡ್ಕೊಂಡಿರು ಅಂತ ಪಾದುಕೆ ಕೊಟ್ ಹೋಗೋಕೆ ಸಾಧ್ಯವೇ? ಯಾರು ತಗೋತಾರೆ? ಸಮಸ್ಯೆ ಕುರ್ಚಿದೂ ಅಲ್ಲ. ಪಾದುಕೆದೂ ಅಲ್ಲ ಬರೀ ನೀರಿನದು ಸಮಸ್ಯೆ ನೀರಿನದಾದರೂ ಅದು ಹೆಪ್ಪುಗಟ್ಟಿದ ಐಸ್ ಆಗ್ತಿದೆ ಅದು ಕರಗಿ ನೀರಾಯ್ತು ಅನ್ನುವಂತೆಯೇ ಇಲ್ಲ. ಪ್ರತಿಯೊಂದು ಸಮಸ್ಯೆಗೂ ಕೊನೆ ಅನ್ನುವುದೊಂದಿದೆ. ಆ ಕೊನೆ ಎಲ್ಲಿದೆ, ಹೇಗಿದೆ ಅನ್ನೋದೇ ಸಮಸ್ಯೆ. ಎಲ್ಲರೂ ರಾಮ ರಾಮ ಕೃಷ್ಣ ಕೃಷ್ಣ ಅಂತ ಆಕಾಶ ನೋಡ್ತಿದಾರೆ ಕಾವೇರಿರುವ ಕಾವೇರಿ ಯಾವಾಗ, ಎಲ್ಲಿ, ಹೇಗೆ ಕಾವಿಳಿಸಿಕೊಳ್ತಾಳೆ ನೋಡಬೇಕಲ್ಲ. ಇಂಥಾ ಕಾಲದಲ್ಲಿ ಎಲ್ಲರಲ್ಲೂ ಸಂಯಮ, ತಾಳ್ಮೆ, ವಿಶಾಲ ಮನೋಭಾವ, ಮೂಡಲಿ ಎಂದು ಅಪರಂಜಿ ಹಾರೈಸುತ್ತಾಳೆ.

ವರದಿಗಾರ

ಅಮೇರಿಕದಲ್ಲಿ ಆತ್ಮಾವಲೋಕನ

– ಕುಮುದಾ ಪುರುಷೋತ್ತಮ್

ಸೆಪ್ಟೆಂಬರ್ 11, 2001, ಮಂಗಳವಾರ ಮುಂಜಾನೆಯ ಸುಮಾರು ಹತ್ತರ ಸಮಯ. ಬೆಳಗಿನ ಉಪಹಾರ ಮುಗಿಸಿ ಟೀ ಹೀರುತ್ತಾ ಕುಳಿತಿದ್ದೆವು. ಉದ್ಯೋಗ ನಿಮಿತ್ತ ವಾಷಿಂಗ್‌ಟನ್ ಡಿ.ಸಿ.ಗೆ ಹೋಗಿದ್ದ ತಮ್ಮ ಅನಿರೀಕ್ಷಿತವಾಗಿ ಫೋನ್ ಮಾಡಿದ. ''ಸುದ್ದಿ ತಿಳೀತಾ'' ಎಂದ ಅಷ್ಟೆ. ಹಿಂದಿಲ್ಲ ಮುಂದಿಲ್ಲ. ಬರೀ ಒಂದು ಪ್ರಶ್ನೆಯಷ್ಟೆ. ಹೃದಯ ಬಡಿತ ನಾಗಾಲೋಟದಲ್ಲೋಡಿತು. ಭಾರತದಲ್ಲೇನಾಯಿತೋ? ಮತ್ತೊಂದು ಭೂಕಂಪ? ಪಾಕಿಸ್ತಾನಕ್ಕೆ ಮತ್ತೊಮ್ಮೆ ಕಾಲ್ಕೆರೆತ? ವೀರಪ್ಪನ್ ಮತ್ತೆ ಬಾಲ ಬಿಚ್ಚಿದನೇ? ತಮ್ಮ ಮುಂದುವರೆದ. ''ನ್ಯೂಯಾರ್ಕಿನ ವರ್ಲ್ಡ್ ಟ್ರೇಡ್ ಸೆಂಟರಿನ ಮೇಲೆ ಭಯೋತ್ಪಾದನಾ ಧಾಳಿ ನಡೆದಿದೆ. ವಾಷಿಂಗ್‌ಟನ್ನಿನ ರಕ್ಷಣಾ ಖಾತೆಯ ಮುಖ್ಯ ಕಚೇರಿ ಪೆಂಟಗನ್ ಮೇಲೂ ಧಾಳಿ ನಡೆದಿದೆ. ನಾನು ಸಮೀಪದ ಕಟ್ಟಡದಲ್ಲಿ ಮೀಟಿಂಗ್‌ನಲ್ಲಿದ್ದೆ. ಕೆಂಪು ದೀಪ ಹತ್ತಿಕೊಂಡು ಆತಂಕದ ಸೂಚನೆಯಾಯಿತು. ಕೂಡಲೇ ನಮ್ಮನ್ನೆಲ್ಲಾ ತಂಗಿದ್ದ ಹೋಟಲಿಗೆ ರವಾನೆ ಮಾಡಿದರು. ಹೆಚ್ಚಿನ ಸುದ್ದಿಗೆ ಟಿ.ವಿ. ಹಾಕಿನೋಡು'' ಎಂದ. ಟಿ.ವಿ.ಯಲ್ಲಿ ತೋರಿಸುತ್ತಿದ್ದುದು ಯಾವುದೋ ಸಾಹಸ ಚಲನಚಿತ್ರ ಎಂಬಂತಹ ಭ್ರಮೆ ತರಿಸುವಂತಿತ್ತು. ಜಗತ್ಪ್ರಸಿದ್ಧ ಟ್ರೇಡ್ ಸೆಂಟರಿನ ಒಂದು ಗೋಪುರ ಆಗಲೇ ನಿರ್ನಾಮವಾಗಿತ್ತು. ನೋಡ ನೋಡುತ್ತಿದ್ದಂತೆ ಬಲ ಬದಿಯಿಂದ ಹಾರಿಬಂದ ವಿಮಾನ ಎಡರನೇ ಗೋಪುರಕ್ಕೆ ಅಪ್ಪಳಿಸಿ ಬೆಂಕಿ ಜ್ವಾಲೆ ಎಬ್ಬಿಸಿ ತಾನೂ ಜ್ವಾಲೆಯಲ್ಲಿ ಉರಿದು ಬೂದಿಯಾಯಿತು. ಎರಡು ಗೋಪುರಗಳ ಅಪ್ಪಳಿಕೆಗಳ ನಡುವೆ ಹದಿನೆಂಟು ನಿಮಿಷಗಳ ಅಂತರವಿತ್ತಂತೆ. ಹೀಗಾಗಿ ಎರಡನೆಯ ಘಟನೆಯ ವೇಳೆಗೆ ಹಾರುತ್ತಿದ್ದ ಬೇರೊಂದು ವಿಮಾನದಿಂದ ಎಲ್ಲವನ್ನೂ ಚಿತ್ರೀಕರಿಸಲಾಗಿತ್ತು. ಇದಾಗುತ್ತಿದ್ದಂತೆ ಜಗತ್ತಿನ ಅತಿ ಬಲಿಷ್ಠ ರಾಷ್ಟ್ರದ ಮುಖ್ಯ ರಕ್ಷಣಾ ಕಚೇರಿ ಪೆಂಟಗನ್‌ನ ಮಧ್ಯಭಾಗವನ್ನು ಪ್ರಯಾಣಿಕರನ್ನು ಹೊತ್ತ ಮತ್ತೊಂದು ವಿಮಾನ ಅಪ್ಪಳಿಸಿ ತಾನೂ ಛಿದ್ರ ಛಿದ್ರವಾಯಿತು. ಸತ್ತವರ ಸಂಖ್ಯೆ ಎಣಿಕೆಗೆ ನಿಲುಕದಷ್ಟು ಅಗಾಧ. ಇಡೀ ರಾಷ್ಟ್ರ ಕಣ್ಣೀರಿಟ್ಟಿತು. ಅದರ ಜೊತೆಗೆ ನಮ್ಮ ಕಣ್ಣೀರ ಹನಿಯೂ ಸೇರಿತು. ಅದೇ ಸಂದರ್ಭದಲ್ಲಿ ಜಮ್ಮು ಕಾಶ್ಮೀರದಲ್ಲಿ ದಿನವೂ ಹೇಳಹೆಸರಿಲ್ಲದಂತೆ ಸಾಯುತ್ತಿರುವ ಅಸಂಖ್ಯಾತ ಅಮಾಯಕರನ್ನು ನೆನೆದು ಮನಸ್ಸು ಮುದುಡಿತು. ಅಲ್ಲಾದರೋ ದಿನವೂ ಹತ್ಯಾಕಾಂಡ. ದಿನಾ ಸಾಯುವವರಿಗೆ ಅಳುವವರ್ಯಾರು?

ಅಮೇರಿಕಾ ಅತಿ ಬಲಿಷ್ಟ ಶ್ರೀಮಂತ ರಾಷ್ಟ್ರ ಹಿರಿಯಣ್ಣನಂತೆ ಎಲ್ಲ ಕಡೆ ಯಜಮಾನಿಕೆ ತೋರಿಸುತ್ತಾ ಜಗತ್ತಿನ ಯಾವುದೇ ಮೂಲೆಯಲ್ಲಿ ರಾಜಕೀಯ ಅಸ್ಥಿರತೆ ಕಂಡರೂ ಅದರಲ್ಲೆಲ್ಲಿಯೋ ಒಂದು ಕಡೆ ಇದರ ಕೈವಾಡ ಇದ್ದೇ ಇರುತ್ತದೆಂದು ಬಲ್ಲವರ ಅಂಬೋಣ. ಎಲ್ಲರಿಗೂ ವ್ಯಕ್ತಿ ಸ್ವಾತಂತ್ರ್ಯ, ಪ್ರಜಾತಂತ್ರ, ಮಾನವ ಹಕ್ಕುಗಳನ್ನು ಬೋಧಿಸುತ್ತಲೇ ತನ್ನ ಹಿತಾಸಕ್ತಿಯನ್ನು ಭದ್ರವಾಗಿ ಕಾಪಾಡಿಕೊಳ್ಳುತ್ತಾ ತನ್ನನ್ನು ಹಿಡಿಯುವವರೇ ಇಲ್ಲ ಎಂದು ಬೀಗುತ್ತಿದ್ದ ರಾಷ್ಟ್ರದ ಕಪಾಳಕ್ಕೆ ಹೊಡೆದಂತೆ ಈ ಘಟನೆ ನಡೆದುಹೋಗಿತ್ತು. ಅದರದೇ ನೆಲದಲ್ಲಿ ಅವರದೇ ವಿಮಾನಗಳನ್ನು ಬಳಸಿ ಅವರ ರಕ್ಷಣಾ ಜಾಲವನ್ನು ಮೀರಿ ಅವರ ಹೆಮ್ಮೆಯ ಪ್ರತೀಕವಾಗಿದ್ದ ವರ್ಲ್ಡ್ ಟ್ರೇಡ್ ಸೆಂಟರ್ ಹಾಗೂ ರಕ್ಷಣಾ ಬಲದ ಪ್ರತೀಕವಾಗಿದ್ದ ಪೆಂಟಗನ್ ಮೇಲೆ ಈ ವಿಧ್ವಂಸಕ ಕಾರ್ಯ ನಡೆದುಹೋಗಿತ್ತು. ಇಡೀ ರಾಷ್ಟ್ರ ಇದನ್ನು ನಂಬದೆ, ನಂಬದಿರಲಾಗದೆ ದಿಙ್ಮೂಢಗೊಂಡಿತ್ತು. ಇದುವರೆವಿಗೂ ವಿಶ್ವದ ಎಲ್ಲೆಡೆ ದಿನಂಪ್ರತಿ ನಡೆಯುತ್ತಿದ್ದ ಭಯೋತ್ಪಾದನೆಯತ್ತ ದಿವ್ಯ ನಿರ್ಲಕ್ಷ್ಯ ತೋರುತ್ತಾ ಬಂದಿದ್ದ ಈ ರಾಷ್ಟ್ರವನ್ನು ಹೊಡೆದೆಬ್ಬಿಸಿದಂತಾಗಿತ್ತು. ಇಡೀ ರಾಷ್ಟ್ರ ದುಃಖದ ಕಡಲಲ್ಲಿ ಮುಳುಗಿತು. ಮೊದಲು ಪ್ರಕಟವಾಗಿದ್ದು ರೋಷ ಮತ್ತು ಪ್ರತೀಕಾರದ ಕೂಗು. ಸತ್ತವರ ಸಂಖ್ಯೆ ಹೆಚ್ಚುತ್ತಿದ್ದಂತೆ ದುರಂತದ ಅಗಾಧತೆ ಅರಿವಾಗಿ ಶೋಕ, ಸಂತಾಪ, ಪ್ರಾರ್ಥನಾ ವಿಧಿಗಳು ಸಾಮಾನ್ಯವಾದುವು. ರಾತ್ರಿಯ ವೇಳೆ ಮನೆ ಮನೆಯ ಮುಂದೆ ಸತ್ತವರ ಆತ್ಮಕ್ಕೆ ಶಾಂತಿ ಕೋರಿ ಹಚ್ಚಿಟ್ಟ ಮೊಂಬತ್ತಿ. ನಕ್ಷತ್ರಗಳೊಡನೆ ಸ್ಪರ್ಧಿಸಿದುವು. ನಮ್ಮ ಮನೆಯ ಮುಂದೆಯೂ ಅವು ಉರಿದವು.

ದುರಂತ ನಡೆದ ಮೂರನೆಯ ದಿನ ಮಗಳು, ಅಳಿಯ ವಿಶ್ವವಿದ್ಯಾಲಯದಿಂದ ಎಂದಿಗಿಂತ ತಡವಾಗಿ ಮನೆಗೆ ಬಂದರು. ಗಾಂಧೀಜಿಯ ಭಾವಚಿತ್ರ ಅವರ ಷರ್ಟಿನ ಮೇಲೆ ತೂಗಾಡುತ್ತಿತ್ತು. ನೋಡಿದೊಡನೆ ಭಾರತೀಯ ವಿದ್ಯಾರ್ಥಿ ಸಂಘದ ಮೀಟಿಂಗ್ ಇರಬೇಕೆಂದುಕೊಂಡೆ. ಆದರೆ ಅಂದು ಯೂನಿವರ್ಸಿಟಿಯ ಇಡೀ ವಿದ್ಯಾರ್ಥಿ ವರ್ಗ, ಅಧ್ಯಾಪಕ ವರ್ಗ ಮತ್ತು ಇತರೇ ಬುದ್ಧಿ ಜೀವಿಗಳು ಸಂತಾಪ ಸಭೆ ನಡೆಸಿದ್ದರಂತೆ. ಭಯೋತ್ಪಾದನೆ, ಹಿಂಸೆ ಬಗ್ಗೆ ಚರ್ಚೆ ನಡೆದಾಗ ಗಾಂಧೀಜಿ ಹಾಗೂ ಅವರ ಅಹಿಂಸಾ ಮಾರ್ಗದ ಬಗ್ಗೆ ವಿವರವಾದ ಸಂವಾದ ನಡೆಸಲಾಯಿತಂತೆ. ಗಾಂಧೀಜಿ ಜೀವಂತವಾಗಿದ್ದಿದ್ದರೆ ಅವರು ಇಂತಹ ಹಿಂಸಾಚಾರಕ್ಕೆ ಹೇಗೆ ಪ್ರತಿಕ್ರಯಿಸುತ್ತಿದ್ದರು ಎಂಬುದರ ಬಗ್ಗೆ ವಿಶ್ಲೇಷಣೆ ನಡೆಯಿತಂತೆ. ಪ್ರೇಕ್ಷಕರಿಗೆಲ್ಲಾ ಗಾಂಧೀಜಿಯವರ ಭಾವಚಿತ್ರ ನೀಡಿ ಇಂತಹ ಪರಿಸ್ಥಿತಿಯಲ್ಲಿ ಸೇಡಿನ ಮನೋಭಾವ ತೊರೆದು ಮಾನವೀಯತೆ, ಶಾಂತಿಯ ಸಂದೇಶ ಹೊತ್ತು ಸಾಗಬೇಕೆಂದು ಮನವಿ ಮಾಡಲಾಯಿತು ಎಂದಳು

ಮಗಳು. ಆ ಸಭೆಯಲ್ಲಿ ನಾನೂ ಪಾಲ್ಗೊಳ್ಳಬೇಕಾಗಿತ್ತು ಎಂದು ಮನಸ್ಸು ತುಡಿಯಿತು. ಅಲ್ಲಿದ್ದಿದ್ದರೆ ಮೇಲೆದ್ದು ನಿಂತು ನಾನು ಗಾಂಧಿ ನಾಡಿನಿಂದ ಬಂದವಳು ಎಂದು ಕೂಗಿಬಿಡುತ್ತಿದ್ದೆನೇನೋ!

''ಮುಂದಿನ ಪೀಳಿಗೆಯವರಿಗೆ ರಕ್ತಮಾಂಸ ಹೊತ್ತ ಇಂತಹ ಶಾಂತಿದೂತನೊಬ್ಬ ಈ ಭೂಮಿಯಲ್ಲಿ ನಿಜವಾಗಿ ಜನ್ಮ ತಾಳಿದ್ದನೇ ಎಂದು ನಂಬಲೂ ಕಠಿಣವಾಗಬಹುದು'' - ಇದು ಬಾಪೂಜಿಯವರ ಹತ್ಯೆಯಾದಾಗ ಸಂತಾಪ ಸೂಚಿಸುತ್ತಾ ವಿಶ್ವ ವಿಖ್ಯಾತ ಗಣಿತಜ್ಞ ಆಲ್‌ಬರ್ಟ್ ಐನ್‌ಸ್ಟೀನ್ ಹೇಳಿದ ಮಾತುಗಳು. ಮುಂದಿನ ಪೀಳಿಗೆ ಏಕೆ? ಇಷ್ಟೊಂದು ಹಿಂಸಾಕಾಂಡದ ನಡುವೆ ಈಗಲೇ ನಂಬುವುದು ಕಠಿಣವಾಗುತ್ತಿದೆ.

★★★★★

ಎಷ್ಟೋ ವರ್ಷಗಳ ಹಿಂದಿನ ಮಾತು ತುಮಕೂರಿನ ನಮ್ಮಜ್ಜಿಯ ಮನೆಯಲ್ಲಿ ವರ್ತನೆಯ ಹಾಲನ್ನು ಕೆಂಪಮ್ಮ ಹಾಕುತ್ತಿದ್ದಳು. ವರ್ತನೆ ಎಂದೊಡನೆ ಮನೆಯಲ್ಲಿ ಗೋ ಸಂಪತ್ತು ಇರಲಿಲ್ಲವೆಂದಲ್ಲ. ಕೊಟ್ಟಿಗೆಯಲ್ಲಿ ಮೆಲುಕು ಹಾಕುತ್ತಾ ಅವು ಇರುತ್ತಿದ್ದುವು. ಅವಕ್ಕಾಗಿ ಹುಲ್ಲು, ಹೊಟ್ಟು, ಹಿಂಡಿ ಎಲ್ಲದರ ಜೊತೆಗೆ ನಮ್ಮಜ್ಜಿ ಎರಡು ಹೊತ್ತು ಹೆಚ್ಚಿನ ಗೋಗ್ರಾಸ ನೀಡಿ ಭಕ್ತಿಯಿಂದ ಅದರ ಕೊಂಬಿಗೆ ಅರಿಶಿನ ಕುಂಕುಮವೇರಿಸಿ ಕಣ್ಣಿಗೊತ್ತಿಕೊಳ್ಳುತ್ತಿದ್ದರು. ಅವುಗಳಾರೈಕೆಗೆ, ಕೊಟ್ಟಿಗೆಯ ಶುಭ್ರತೆ ನೋಡಿಕೊಳ್ಳಲು ಇಬ್ಬರು ಆಳುಗಳು ಬೇರೆ ನಿಯಮಿತವಾಗಿದ್ದರು. ಇಷ್ಟೆಲ್ಲಾ ವೈಭೋಗವಿದ್ದೂ ಅವು ನೀಡುತ್ತಿದ್ದುದು ಹೊತ್ತಿಗೆ ಒಂದು ಪಾವು ಹಾಲು. ಹೀಗಾಗಿ ಕೆಂಪಮ್ಮನ ವರ್ತನೆ ಹಾಲು ಅತ್ಯಗತ್ಯವಾಗುತ್ತಿತ್ತು. ಒಳ್ಳೆಯ ಗಟ್ಟಿ ಹಾಲು, ದೋಸೆಯಷ್ಟು ದಪ್ಪ ಕೆನೆ, ಬೆಣ್ಣೆ, ತುಪ್ಪವೆಲ್ಲ ತುಂಬಿದ ಮನೆಗೆ ಅದರಿಂದಲೇ ಪೂರೈಕೆಯಾಗುತ್ತಿತ್ತು. ಇಷ್ಟಾದರೂ ಕೆಂಪಮ್ಮ ಹಾಲು ಹಾಕಲು ಬಂದಾಗ ನಮ್ಮಜ್ಜಿ ''ಇದೇನೇ ಕೆಂಪಮ್ಮ, ಹಾಲು ಈ ಪಾಟಿ ನೀರು? ಇದು ಹಾಲಲ್ಲ ಕಲಗಚ್ಚು'' ಎಂದು ಹೇಳುವುದು ತಪ್ಪುತ್ತಿರಲಿಲ್ಲ. ಒಮ್ಮೆ ಅಜ್ಜಿಯ ಬಳಿ ಈ ಬಗ್ಗೆ ಪ್ರತಿಭಟಿಸಿದ್ದೆ. ''ನೀ ಸುಮ್ನಿರು. ನಾನು ಹೀಗೆ ಆಗಾಗ ಹೇಳ್ತಾನೇ ಇರ್ಬೇಕು. ಇಲ್ದಿದ್ರೆ ಹೆಚ್ಕೊಂಡು ಬಿಡ್ತಾಳೆ. ಆಮೇಲೆ ನಿಜವಾದ ಕಲಗಚ್ಚೇ ತಂದು ಸುರೀತಾಳೆ'' ಎನ್ನುತ್ತಿದ್ದರು.

ಮಗಳ ಮನೆಯಲ್ಲಿ ಕಾಫಿ ಡಿಕಾಕ್ಷನಿಗೆ ಹಾಲಿನ ಕ್ಯಾನಿನಿಂದ ಹಾಲು ಬೆರಸುವಾಗ ಅಜ್ಜಿ ಹೇಳುತ್ತಿದ್ದ ಕಲಗಜ್ಜಿನ ನೆನಪಾಯಿತು. ಹಾಲಿನ ಪಾತ್ರೆ ತೊಳೆದ ನೀರಿನಂತಿತ್ತು ಈ ಹಾಲು. ಇದೆಂತಹ ಅನ್ಯಾಯ ಎಂದುಕೊಳ್ಳುತ್ತಾ ಕ್ಯಾನಿನ ಮೇಲಿನ ಬರಹ ನೋಡಿದೆ. ಫ್ಯಾಟ್ ಫ್ರೀ ಮಿಲ್ಕ್ ಎಂದಿತ್ತು! ಈ ಹಾಲೇ


ಆರೋಗ್ಯಕ್ಕೆ ಒಳ್ಳೆಯದಂತೆ. ಎಷ್ಟಾದರೂ ರಕ್ತದಲ್ಲಿ ಕೆಟ್ಟ ಕೊಲೆಸ್ಟರಾಲ್ ಹೆಚ್ಚಾಗದಂತೆ ನೋಡಿಕೊಳ್ಳುವುದಿಲ್ಲವೇ. ಹೀಗಾಗಿ ಎಲ್ಲರಿಂದ ಕೊಬ್ಬು ರಹಿತ (ಹೆಚ್ಚೆಂದರೆ 1% ಅಥವಾ 2% ಕೊಬ್ಬಿರುವ) ರುಚಿರಹಿತ ಬಿಳಿಯ ದ್ರವದ ಸೇವನೆ. ಪರಿಣಾಮ ಇದರಿಂದ ತಯಾರಾದ ಕಾಫಿಯ ರುಚಿ ದೇವರಿಗೇ ಪ್ರೀತಿ.

ಎಲ್ಲರಿಗೂ ತಾವು ಸೇವಿಸುವ ಆಹಾರದ ಬಗ್ಗೆ ಬಲು ಕಾಳಜಿ. ಮನೆಗೆ ಆಹಾರ ಸಾಮಗ್ರಿ ತರುವಾಗ ಪ್ಯಾಕೆಟ್‌ನ ಮೇಲೆ ಉಲ್ಲೇಖಿಸಿರುವ ಕೊಬ್ಬು, ಪಿಷ್ಟ, ಪ್ರೋಟೀನ್, ಖನಿಜ, ವಿಟಮಿನ್‌ಗಳ ಶೇಕಡಾವಾರು ಪ್ರಮಾಣ ನೋಡಿಯೇ ಆಯ್ಕೆ ಮಾಡುವುದು. ಇಲ್ಲಿರುವ ಹೆಚ್ಚಿನ ದಕ್ಷಿಣ ಭಾರತೀಯರು ತೆಂಗಿನಕಾಯಿ ಎಂದರೆ ಗಾವುದ ದೂರ. ಅದರಲ್ಲಿರುವ ಸ್ಯಾಚುರೇಟೆಡ್ ಕೊಬ್ಬು ಹೃದಯರೋಗಕ್ಕೆ ಸಹಾಯಕ ಎಂಬುದು ಒಪ್ಪತಕ್ಕದ್ದೇ ಆದರೂ ಹಾಗೆಂದು ಅದನ್ನು ಸಂಪೂರ್ಣ ತ್ಯಜಿಸಿರುವುದೂ ಸ್ವಲ್ಪ ಅತಿರೇಕವೇ ಎನ್ನಿಸೀತು. ಆದರೆ ಪೂಜೆ ಪುನಸ್ಕಾರಗಳಲ್ಲಿ ಅದರ ಬಳಕೆ ಉಂಟು. ಭಗವಂತನಿಗೆ ಹೇಗಿದ್ದರೂ ಹೃದಯಬೇನೆ ಸಾಧ್ಯವಿಲ್ಲ ಎಂದಿರಬಹುದು! ನೈವೇದ್ಯ ಮಂಗಳಾರತಿಯಾಗುವವರೆಗೆ ಕಾಯಿ ಹೋಳಿಗೆ ವಿಶೇಷ ಮಾನ್ಯತೆ. ಪ್ರಸಾದ ವಿತರಣೆಯ ಸಂದರ್ಭದಲ್ಲಿ ಮಾತ್ರ ಅದು ತ್ಯಾಜ್ಯವಸ್ತು.

ವ್ಯಾಪಾರಕ್ಕಾಗಿ ಅಂಗಡಿಗಳಿಗೆ ಹೋದಾಗ ನನ್ನ ಮನಸ್ಸಿಗೆ ಬಹುವಾಗಿ ನಾಟಿದ್ದು ಇಲ್ಲಿಯ ವಾಣಿಜ್ಯ ವ್ಯವಸ್ಥೆಯಲ್ಲಿ ಗ್ರಾಹಕನಿಗಿರುವ ಸ್ಥಾನ. ಗ್ರಾಹಕನನ್ನು ಸಂತೃಪ್ತಿ ಪಡಿಸಲು ಅಂಗಡಿಯವರು ಟೊಂಕ ಕಟ್ಟಿ ನಿಲ್ಲುತ್ತಾರೆ. ಖರೀದಿಸಿದ ವಸ್ತು ನಮಗಿಷ್ಟವಾಗದಿದ್ದಲ್ಲಿ ಅಥವಾ ದೋಷಯುಕ್ತವಾಗಿದ್ದಲ್ಲಿ ಯಾವುದೇ ತಕರಾರು ಎದುರಿಸದೆ ಹಿಂದಿರುಗಿಸಿ ಹಣ ವಾಪಸ್ಸು ಪಡೆಯಬಹುದು. ನನ್ನ ಮಗನಿಗಾಗಿ ಒಂದು ಕೋಟು ಖರೀದಿಸಿ ಒಂದು ತಿಂಗಳ ಬಳಿಕ ಅಳತೆ ಸರಿಹೋಗದು ಎನಿಸಿ ವಾಪಸ್ಸು ಮಾಡಲು ಹೋದೆ. ದೇಶದ ತುಂಬ ಅನೇಕ ಶಾಖೆಗಳನ್ನು ಹೊಂದಿರುವ ಆ ಪ್ರಸಿದ್ಧ ವ್ಯಾಪಾರ ಸಂಸ್ಥೆ ಬಿಲ್ಲನ್ನು ಕೂಡ ಪರೀಕ್ಷಿಸದೆ ವಾಪಸ್ಸು ಪಡೆದು ಹಣ ಹಿಂದಿರುಗಿಸಿತು. ಅಷ್ಟೇ ಅಲ್ಲ, ''ನೀವು ಮತ್ತೊಮ್ಮೆ ನಮ್ಮಲ್ಲಿಗೆ ಬನ್ನಿ. ನಿಮ್ಮ ಸೇವೆಗೆ ಸದಾ ಸಿದ್ಧ'' ಎಂಬ ನಗು ಮುಖದ ಬೀಳ್ಕೊಡುಗೆ ಬೇರೆ. ಆ ಸಂದರ್ಭದಲ್ಲಿ ನನ್ನ ನೆನಪಿಗೆ ಬಂದಿದ್ದು ನಮ್ಮ ಅಂಗಡಿಗಳ ಬಿಲ್ ಮೇಲೆ ಮುದ್ರಿತವಾಗಿರುವ ಎಚ್ಚರಿಕೆ, 'ಗೂಡ್ಸ್ ಒನ್ಸ್ ಸೋಲ್ಡ್ ಕೆನ್ನಾಟ್ ಬಿ ರಿಟರ್ನ್ಡ್' ಎಂಬುದು. ಒಮ್ಮೆ ಕೊಂಡ ಉಡುಪು ನೀರಿಗೆ ಹಾಕಿದೊಡನೆ ಬಣ್ಣ ಬಿಡಲಿ ಅಥವಾ ಕುಗ್ಗಲಿ ಅದನ್ನು ಕೊರಳಿಗೆ ಹಾಕಿಕೊಂಡು ಜೀವಾವಧಿ ಶಿಕ್ಷೆಗೆ ಒಳಗಾಗುವುದು ನಮ್ಮ ಕರ್ಮ. ಗ್ರಾಹಕರನ್ನು ಕೋಡಂಗಿಗಳನ್ನಾಗಿಸುವುದು ಮಾರಾಟ ಮಾಡುವವರ ಧರ್ಮ.

ಮತ್ತೊಂದು ಸಂಜೆ ಕೆಲಸದಿಂದ ಬೇಗ ಹಿಂದಿರುಗಿದ ನನ್ನ ಅಳಿಯ ಯಜಮಾನರನ್ನೂ, ನನ್ನನ್ನೂ ಹತ್ತಿರದ ಪುಸ್ತಕದ ಅಂಗಡಿಗೆ ಹೊರಡಿಸಿದ. ''ನನಗೇನೂ ಪುಸ್ತಕ ಕೊಂಡುಕೊಳ್ಳುವ ಆಲೋಚನೆ ಇಲ್ಲ'' ಎಂದೆ. ಬೇಡ, ಸುಮ್ಮನೇ ಕುಳಿತು ಓದಿ ಎಂದ. ಅಲ್ಲ, ಸುಮ್ಮನೇ ಕುಳಿತು ಓದಲು ಅದೇನು ಅಂಗಡಿಯೋ ಅಥವಾ ಗ್ರಂಥಾಲಯವೋ?

ಅದು ಮೂರಂತಸ್ತಿನ ವಿಶಾಲವಾದ ಪುಸ್ತಕದ ಮಳಿಗೆ. ಪುಸ್ತಕಗಳನ್ನು ವಿಷಯಕ್ಕೆ ತಕ್ಕಂತೆ ವಿಂಗಡಿಸಿ ಬಲು ಅಚ್ಚುಕಟ್ಟಾಗಿ ಜೋಡಿಸಿದ್ದರು. ಪಂಚತಾರಾ ಹೋಟಲಿನ ಲಾಬಿಯಂತೆ ಅಲ್ಲಲ್ಲಿ ಕುಳಿತು ವಿಶ್ರಮಿಸಲು ಸುಖಾಸನಗಳಿದ್ದುವು. ಗ್ರಾಹಕರು ತಮಗೆ ಹಿಡಿಸಿದ ಪುಸ್ತಕ ಎತ್ತಿ ಕುಳಿತು ಓದಲು ಈ ವ್ಯವಸ್ಥೆಯಂತೆ. ಓದಿ ಖರೀದಿಸಬೇಕೆನಿಸಿದರೆ ಮಾತ್ರ ಕೊಂಡುಕೊಳ್ಳಬಹುದು. ಇಲ್ಲದಿದ್ದರೆ ದಿನಪೂರ್ತಿ ಕುಳಿತು ಅಲ್ಲೇ ಅಧ್ಯಯನ ಮಾಡಿದರೂ ಅವರ ಅಭ್ಯಂತರವಿಲ್ಲ. ಹಸಿವಾದರೆ ಅಲ್ಲೇ ಕಾಫಿ ಶಾಪ್ ಉಂಟು. ಅಲ್ಲಿ ತಿಂಡಿ ತೀರ್ಥ ಮುಗಿಸಿ ಮತ್ತೆ ಅಧ್ಯಯನಕ್ಕೆ ಮುಂದುವರೆಸಬಹುದು. ಒಟ್ಟಿನಲ್ಲಿ ಇಲ್ಲಿ ಗ್ರಾಹಕರಿಗೆ ರಾಜಮರ್ಯಾದೆ.



ಸತ್ತ ಎಮ್ಮೆಗೆ ಹತ್ತು ಸೇರು ತುಪ್ಪ!

- ಶೋಭಾ ಪ್ರಮೋದ್

ಬಾಲ್ಯದಲ್ಲಿ, ಶಿಕ್ಷಕರು ನಮಗೆ ಗಾದೆ ಮಾತುಗಳನ್ನು ಕಲಿಸುತ್ತಿದ್ದಾಗ, ''ಸತ್ತ ಎಮ್ಮೆಗೆ ಹತ್ತು ಸೇರು ತುಪ್ಪ'' ಎಂಬ ಗಾದೆ ಮಾತಿನ ಅರ್ಥವನ್ನು ಸ್ಪಷ್ಟಪಡಿಸಿದ್ದುಂಟು.

ಮೊನ್ನೆ, ''ರಜನಿ'' ಖ್ಯಾತಿಯ, ಪ್ರಿಯಾ ತೆಂಡೂಲ್ಕರ್ ನಿಧನರಾಗ, ಈ ಗಾದೆ ಮಾತು ನೆನಪಾಯಿತು ಮಾರಾಯ್ರೆ! ಈಕೆ ಕರ್ನಾಟಕದ ಸೊಸೆ. ಕಾರಣ, ಅನಂತನಾಗ್ ಅವರೊಂದಿಗೆ ಕೆಲವರ್ಷ ಬಾಳಿದ್ದರು.

ಕ್ಯಾನ್ಸರ್ ರೋಗದಿಂದ ಪ್ರಿಯಾ, ಮೊನ್ನೆ ನಿಧನರಾದಾಗ ಎಲ್ಲ ಮರಾಠಿ ಪತ್ರಿಕೆಗಳೂ, ಅವರ ಇದ್ದ, ಇಲ್ಲದಿರುವ ಗುಣಗಳನ್ನೆಲ್ಲ ಹೊಗಳಿ ಬರೆದು, ಅವರ ಆತ್ಮಕ್ಕೆ ಶಾಂತಿ ಕೋರಿದ್ದರು! ಪ್ರಿಯಾ ಈಗ ಜೀವಂತವಿದ್ದರೆ, ಅರ್ಥಗರ್ಭಿತ ನಗೆಯೊಂದನ್ನು ಚೆಲ್ಲಿ, ತಮ್ಮ ಬಂಡಾಯ ಶೈಲಿಯಿಂದಲೇ, ಹೊಸ ಮರಾಠಿ ಧಾರವಾಹಿಯನ್ನು (ಇದೇ ವಿಷಯದ ಬಗ್ಗೆ) ಆರಂಭಿಸಿಬಿಡುತ್ತಿದ್ದರು!!

ಮರಾಠಿ ನಾಟಕ, ಸಿನೇಮಾ, ಗುಜರಾತಿ ನಾಟಕ, ಮರಾಠಿ ಧಾರವಾಹಿ, ''ಪ್ರಿಯಾ ತೆಂಡೂಲ್ಕರ್ ಟಾಕ್ ಶೋ'' ಇತ್ಯಾದಿ ಕಾರ್ಯಕ್ರಮಗಳಿಂದ ಜನಪ್ರಿಯರಾದ ಪ್ರಿಯಾ, ಕೊನೆಯ ತನಕ ಸ್ವತಂತ್ರ ವಿಚಾರಶೈಲಿಯ, ಸ್ತ್ರೀವಾದಿಯಾಗಿಯೇ ಬಾಳಿದ್ದರು. ಕರಣ್ ರಾಜ್‌ಧನ್‌ರೊಂದಿಗೂ ವಿಚ್ಛೇದನ ಪಡೆದುಕೊಂಡಿದ್ದರು. ಆದರೂ ನಮ್ಮ ಮರಾಠಿ ಪತ್ರಿಕೆಗಳು, ಪ್ರಿಯಾ ಸತ್ತ ಬಳಿಕ, ''ಭಾರತೀಯ ಪತಿವ್ರತೆಯ ಸಂಕೇತ. ಆದರ್ಶ ಮನುಕುಲದ ನಾರಿ. ಶಾಂತ ಸ್ವಭಾವದ ಪ್ರತೀಕ'' ಎಂದೆಲ್ಲ ಪ್ರಿಯಾರವರ ಇಲ್ಲದ ಗುಣಗಳನ್ನೆಲ್ಲ, ಎತ್ತಿ ತೋರಿಸಿ, ಹೊಗಳಿ, ಹೊಗಳಿ ಬರೆದಿದ್ದೇ ಬರೆದಿದ್ದು ಮಾರಾಯ್ರೇ!

ಈಗ (ಬಹುಶಃ) ಸ್ವರ್ಗದಲ್ಲಿ ಕುಳಿತು, ಅಲ್ಲಿ ಹೊಸ ಧಾರವಾಹಿಯೊಂದನ್ನು ಆರಂಭಿಸುವ ಮೂಡಿನಲ್ಲಿರಬಹುದಾದ, ಪ್ರಿಯಾ, ಮರಾಠಿ ಪತ್ರಿಕೆಗಳನ್ನು ಓದಿದರೆ, ಹೊಟ್ಟೆ ಹುಣ್ಣಾಗುವಂತೆ ಖಂಡಿತ ನಗುತ್ತಾರೆ ಮಾರಾಯ್ರೆ!!

★★★

ವಿಧಿ - ವಿಲಾಸ

- ಇಸ್ಮಯಿಲ್

ಯಾಕೊ ಪ್ರಾರಂಭದಿಂದಲೇ ಪಾರಬ್ಧ ಶ್ರೀಲಂಕಾದಲ್ಲಿ ಐ.ಸಿ.ಸಿ. ಚಾಂಪಿಯನ್ಸ್ ಟ್ರೋಫಿ. ನನ್ನ ಕೇಳಿದರೆ ವಾಸ್ತು ಚೆಕ್ ಮಾಡಿ ಮ್ಯಾಚ್ ಫಿಕ್ಸ್ ಮಾಡಬೇಕಾಗಿತ್ತು. ತಪ್ಪು ತಿಳಿಯಬೇಡಿ. ಮ್ಯಾಚ್ ಫಿಕ್ಸಿಂಗ್ ಅನ್ನೊ ಪದಕ್ಕೆ ಈಗಿನ ಅರ್ಥವಲ್ಲ. ಪಂದ್ಯದಲ್ಲಿ ಪಾಲ್ಗೊಳ್ಳೊದಕ್ಕೆ ಕರಾರು ಪತ್ರಕ್ಕೆ ತಕರಾರು ಶುರುವಾಯ್ತು. ಜ್ಯೂನಿಯರ್ ತಂಡವನ್ನು ತಯಾರಿ ಮಾಡಿದ್ದು ದಂಡವಾಯಿತು. ಹೇಗೋ ಏನೊ ಪಂದ್ಯಗಳು ಶುರುವಾಯಿತು. ಇಷ್ಟೆಲ್ಲಾ ಹಣ ಸುರಿದು ಕಷ್ಟಪಟ್ಟು ಆಡಿಸಿದರೆ ಮಳೆ ಬರಬೇಕೆ ಫೈನಲ್ಸ್‌ಗೆ? ಒಂದು ದಿನ ಹಾಳಾಗಿಹೋಗಲಿ ಅಂದ್ರೆ ಮುಂದೂಡಿದ ದಿನವೂ ಹಾಗೆ ಅದೇ ಟೈಂಗೆ ಮಳೆ ವಕ್ರಿಸಬೇಕೆ? ಅದೂ ಭಾರತ ಗೆಲ್ಲುವ ಸ್ಥಿತಿಯಲ್ಲಿದ್ದಾಗ! ಸೂರ್ಯ (ಜಯ) ಚೆನ್ನಾಗಿದ್ದಾಗಲೂ ಮಳೆ ಅವನು ಬಿದ್ದಾಗಲೂ ಮಳೆ.

ಈ ಸುಖಕ್ಕೆ ಏಕೆ ಶ್ರೀನಾಥ್ ಹೋಗಿದ್ದು ಎಂದು ಎಲ್ಲರೂ ಕೇಳುವಂತಾಯಿತು. ಪಾಪ ಇದ್ದಕ್ಕಿದ್ದ ಹಾಗೆ ಕರೆಸಿಕೊಂಡಾಗ ಶ್ರೀನಾಥ ತಾನು ಹಾಕಿಕೊಳ್ಳಬೇಕಾದ ಶರ್ಟನ್ನು ತೆಗೆದುಕೊಂಡು ಹೋಗಲಿಲ್ಲ. ಅದೂ ಅವನ ತಪ್ಪಿಲ್ಲ ಬಿಡಿ. ಟೈಲರ್ ಏರ್‌ಪೋರ್ಟ್ (Airport)ಗೆ ಸರಿಯಾದ ವೇಳೆಯಲ್ಲಿ ತಲುಪಿಸದಿದ್ದರೆ ಅವನೇನ್ ಮಾಡ್ತಾನೆ. ಸರಿಹೊಂದುವ ಶರ್ಟ್ ಹುಡುಕಾಟದಲ್ಲಿ ಅವನಿಗೆ ಸಿಕ್ಕಿದ್ದು ಅನಿಲ್ ಕುಂಬ್ಳೆ ಶರ್ಟು. ಎಷ್ಟಾದರೂ ಒಂದೇ ನಾಡಿನ ಮಕ್ಕಳಲ್ವೆ, ಆ ಶರ್ಟ್‌ಗೋಸ್ಕರ ಕುಂಬ್ಳೆಯನ್ನು ಕೂರಿಸಲು ಆಯ್ಕೆ ಸಮಿತಿಯವರು ತೀರ್ಮಾನಿಸಿದರು. ಶ್ರೀನಾಥ ಪ್ರೇಮದಾಸ ಸ್ಟೇಡಿಯಂಗೆ ಕುಂಬ್ಳೆ ಶರ್ಟ್‌ನಲ್ಲಿ ಕಣಕ್ಕಿಳಿದ. ಒಮ್ಮೆ ಕಾಮೆಂಟೆಟರ್‌ಗ್ಳೂ ತಬ್ಬಿಬ್ಬಾಯಿತು. ಇನ್ನು ಪ್ರಪಂಚದಲ್ಲಿ ಎಷ್ಟೊಂದು ಕ್ರೀಡಾ ಪ್ರೇಮಿಗಳಿಗೆ ತಪ್ಪು ತಿಳುವಳಿಕೆ ಆಯ್ತೊ ದೇವರೇ ಬಲ್ಲ. ದುರಾದೃಷ್ಟ ಬೇರೆ ಶ್ರೀನಾಥ್ ಅತ್ಯಂತ ದುಬಾರಿ ಬೌಲರ್ ಆದಾಗ ಕುಂಬ್ಳೆ ಹೆಸರು ಕೆಟ್ಟುಹೋಯಿತು. ಆದರೆ ಆಟದ ಮಧ್ಯದಲ್ಲಿ ಶರ್ಟ್ ವಾಪಸ್ಸು ಕೇಳುವ ಹಾಗಿಲ್ಲ. ಮ್ಯಾಚ್ ಮುಗಿದ ಮೇಲೆ ಮಾನನಷ್ಟ ಮೊಕದ್ದಮೆ ಹಾಕಲು ಕುಂಬ್ಳೆ ಯೋಚಿಸಿರಬೇಕು. ಸುಬ್ರಮಣ್ಯಸ್ವಾಮಿ ಆಗಲೇ ಪಬ್ಲಿಕ್ ಇಂಟರೆಸ್ಟ್ ಕೇಸೊಂದನ್ನು ಐ.ಸಿ.ಸಿ. ವಿರುದ್ಧ ಹಾಕಲು ತಯಾರು ಮಾಡಿಕೊಂಡಿದ್ದಾರೆಂದು ಚೆನ್ನೈ ವರದಿಗಳು ಸ್ಪಷ್ಟಪಡಿಸಿವೆ. ಹೇಗಿದ್ದರೂ

ಐ.ಸಿ.ಸಿ. ಹೆವಿ ಡ್ಯಾಮೆಜ್ ಕೊಡಲು ಶಕ್ತ. ಅದನ್ನು ವಸೂಲಿ ಮಾಡಲು ಹವಣಿಸಿದ್ದಾರೆ.

ಈ ಗಲಾಟೆಯಲ್ಲಿ ಮಳೆ ಬಿದ್ದು ಪಂದ್ಯ ನಿಂತುಹೋಯಿತು. ಇಂತಹ ಸಂದರ್ಭಗಳನ್ನು ನಿಭಾಯಿಸಲು ಇನ್ಮುಂದೆ ಫೈನಲ್‌ಗಳನ್ನು ಮಳೆ ಬಂದಾಗ ಪಿಚ್ ಕವರ್ ಮಾಡುವ ಬದಲು ಮೇಲ್ಛಾವಣಿ ಹಾಕುವ ಏರ್ಪಾಡು ಮಾಡಬೇಕು ಅಂತ ನನ್ನ ಸ್ನೇಹಿತನ ಸಲಹೆ.

ಫೈನಲ್ಸ್‌ನ ಮುಂದಿನ ದಿನ ಆಡಿದಾಗ ಶ್ರೀನಾಥ್‌ನನ್ನು ಕೂರಿಸಿ ಮತ್ತು ಕುಂಬ್ಳೆಯನ್ನು ಇಳಿಸಿದ್ದಕ್ಕೆ ಅನೇಕ ಕಾರಣಗಳನ್ನು ಹೇಳುತ್ತಾರೆ. ಆದ ದೋಷವನ್ನು ಪರಿಹಾರ ಮಾಡಿಕೊಳ್ಳಲು ಆ ರೀತಿ ಮಾಡಿದರಂತೆ. ಪಾಪ ಶ್ರೀನಾಥ್‌ಗೆ ಪೆವಲಿಯನ್‌ನಲ್ಲೂ ಸ್ಥಳ ಕೊಡದೆ ಬೌಂಡ್ರಿ ಲೈನ್‌ನಲ್ಲಿ ಕೂಡಿಸಿದರೆಂಬ ಆಪಾದನೆ ಐ.ಸಿ.ಸಿ. ಮೇಲೆ ಇದೆ. ಅತಿ ಹೆಚ್ಚು ಬೌಂಡ್ರಿಗಳನ್ನು ಕೊಟ್ಟಿದ್ದಕ್ಕಾಗಿ ಆಯ್ಕೆ ಸಮಿತಿಯವರು ಶಿಕ್ಷೆ ಕೊಟ್ಟು ಅಲ್ಲಿ ಕೂಡಿಸಿದರೆಂಬುದು ಒಂದು ಕಾರಣ - ಮತ್ತೆ ಕೆಲವರು ಶ್ರೀನಾಥ್ ಸ್ವ-ಇಚ್ಛೆಯಿಂದ ಸ್ವ-ಜಿಗುಪ್ಸೆಯಿಂದ ಹಾಗೆ ಕೂತಿದ್ದ ಅಂತಾರೆ.

ಲಗಾನ್ ಚಿತ್ರಕ್ಕೂ ಭಾರತೀಯ ಕ್ರಿಕೆಟ್‌ಗೂ ಹಾಗೂ ಭಾರತದ ಮಳೆಗೂ ಯಾವಾಗಲೂ ನಂಟು. ಈ ಬಾರಿ ಲಗಾನ್‌ನ ಗಡ್ಡದ ಪಾತ್ರಧಾರಿ ಮಳೆ ದೇವರನ್ನು "ನೀನು ಬರಬೇಡ ನಮಗೆ ನೀರಿನ ಬರವೇ ಇರಲಿ, ಕ್ರಿಕೆಟ್ ನಡೆಯಲಿ" ಎಂದು ಶ್ರೀಲಂಕಾದಲ್ಲಿ ಬೇಡಿಕೊಂಡ. ದೇವರಿಗೆ ಮನುಷ್ಯನ ಬೇಡಿಕೆಗಳೇ ಅರ್ಥವಾಗೊಲ್ಲ.

ಮೈಸೂರಿನಲ್ಲಿ ಶ್ರೀನಾಥ್ ಅವರನ್ನು ಗುರುತಿಸಿ ಗೌರವಿಸಲು ವಿಫಲನಾದ ಪೋಲಿಸ್ ಇನ್ಸ್‌ಪೆಕ್ಟರ್ ಮೇಲೆ ಇನ್ನೂ ಕೇಸ ಪೆಂಡಿಂಗ್ ಇದೆ. ಅವನ ಕೇಸನ್ನು ಮನ್ವಂತರದ ಸೀತಾರಾಮ್ ತೆಗೆದುಕೊಂಡಿದ್ದಾನೆಂಬ ಸುದ್ದಿ ಬಂದಿದೆ. ಪೋಲಿಸ್ ಕಡೆ ಈಗ ಬಹಳ ಒಳ್ಳೆ evidence ಬಂದಿದೆ. "ಯಾರ ಯಾರದ್ದೊ ಶರ್ಟ್‌ನಲ್ಲಿ ಆಟ ಆಡೊ ಅಭ್ಯಾಸದಿಂದ ಶ್ರೀನಾಥ್‌ಗೆ ಗುರುತಿಸುವುದಾದರೂ ಹೇಗೆ. ಶ್ರೀಲಂಕಾ ಮ್ಯಾಚ್ ನೋಡಿದ್ದೀರಾ ಯುವರ್ ಆನರ್ ಮುಂದೆ ಶ್ರೀನಾಥ್, ಹಿಂಬದಿಯಲ್ಲಿ ಕುಂಬ್ಳೆ. ಹೀಗಿರುವಾಗ ಪೋಲೀಸ್ ಇನ್ಸ್‌ಪೆಕ್ಟರ್ ಅವರನ್ನು ಗುರುತು ಹಿಡಿಯಲು ವಿಫಲನಾಗಿದ್ದು ಸಹಜ. ಆದ್ದರಿಂದ ಅವರ ಮೇಲಿನ ಕೇಸ್ ವಾಪಸ್ಸು ತೆಗೆದುಕೊಂಡು ಮತ್ತೆ ಹಳೆಯ ಜಾಗಕ್ಕೆ ವರ್ಗ ಮಾಡಬೇಕೆಂದು ವಾದಿಸುತ್ತಾರಂತೆ.

★★★

ಸಂಡೇ ಕಿ ಸಂಡೇ

- ಭಕ್ತ

ಮನಸ್ಸಿನ ನೆಮ್ಮದಿಯನ್ನು ಕಲಕಿ, ಕದಡಿಬಿಡುವ ಹಲವು ಘಟನೆ, ನೆನಪುಗಳು ಎಲ್ಲರ ಅನುಭವಕ್ಕೆ ಬಂದದ್ದೇ. ವಯಸ್ಸಾಗುತ್ತಾ ಬಂದಂತೆ ಈ ನೆನಪುಗಳ ಸಂಖ್ಯೆಯೂ ಹೆಚ್ಚುತ್ತಿದೆಯೇನೋ ಅನ್ನಿಸುತ್ತಿದೆ ನನಗೆ.

ಹಿಂದೊಮ್ಮೆ ನಮ್ಮಪ್ಪ ತನ್ನ ವಾಣಿಜ್ಯ ವ್ಯವಹಾರಾನ ನನ್ನ ಮೇಲೆ ಹೇರಿ, ಹೀಗೆ ಮಾಡು ಹಾಗೆ ಮಾಡು ಅಂತ ಫೋನಿನಲ್ಲೇ ಆಜ್ಞೆ ಕೊಡುಕ್ಕೆ ಪ್ರಾರಂಭಿಸಿದಾಗ ನಾನು ಸಹನೆ ಕಳೆದುಕೊಂಡು ಅವನೊಂದಿಗೆ ಬಹು ನಿಷ್ಠುರವಾಗಿ ಮಾತನಾಡಿದ್ದೆ. ಅಂದು ಅವನು ನನ್ನೊಂದಿಗೆ ಮರುಮಾತಾಡಿರಲಿಲ್ಲ. ನನ್ನೊಂದಿಗಿರಲಿ, ಬೇರೆ ಯಾರೊಂದಿಗೂ ಅವನು ಆ ಕುರಿತು ಪ್ರಸ್ತಾಪ ಮಾಡಲಿಲ್ಲ. ಆದರೂ ಆ ಘಟನೆಯನ್ನು ನಮ್ಮಪ್ಪ ಕೊನೆಯವರೆಗೂ ತನ್ನ ಹೃದಯಲ್ಲೇ ಬಚ್ಚಿಟ್ಟುಕೊಂಡಿರಬಹುದೆಂದು ನನಗೆ ಅನ್ನಿಸುತ್ತದೆ. ಇಂದಿಗೂ ಅದೊಂದು ಕಹಿ ನೆನಪು.

ಇನ್ನೊಮ್ಮೆ ನನ್ನ ಮಗ (ಅವನು ಆಗ ಐದು ವರ್ಷದ ಮಗು) ನನ್ನ ಟ್ರಾನ್ಸಿಸ್ಟರ್ ರೇಡಿಯೋವನ್ನು ಒಡೆದುಹಾಕಿದಾಗ ನಾನು ಕೋಪದಿಂದ ಅವನ ಕಪಾಳಕ್ಕೆ ಎರಡು ಬಿಗಿದಿದ್ದೆ. ಗೋಲಿಗೂ, ಟ್ರಾನ್ಸಿಸ್ಟರಿಗೂ ಇರುವ ಪ್ರಭೇದ, ಪಾಪ ಆ ಮಗುವಿಗೆ ಹೇಗೆ ತಿಳಿಯಬೇಕು. ಇಂದಿಗೂ, ಅಂದು ಏಟು ಹೊಡೆದಾಗ ಆ ಮಗುವಿನ ಕಣ್ಣುಗಳಲ್ಲಿ ನಾನು ಕಂಡ ಷಾಕ್, ನನ್ನ ನೆನಪಿಗೆ ನಿಚ್ಚಳವಾಗಿ ಮರುಕಳಿಸಿ, ಕಣ್ಣುಗಳು ಒದ್ದೆಯಾಗುತ್ತವೆ.

ಇವೆರಡು ಮಾಯದ ಗಾಯಗಳಿಗೆ ಹೋಲಿಸಿದರೆ, ನನ್ನ ಇತರ ಕಹಿ ನೆನಪುಗಳು ಅಷ್ಟೇನೂ ತೀವ್ರ ಅನುಭವಗಳಲ್ಲ. ಹಲವಕ್ಕೆ ನಾನು ಸೂಕ್ತ ಪ್ರಾಯಶ್ಚಿತ್ತವನ್ನೂ ಸಹಾ ಮಾಡಿಕೊಂಡಿದ್ದೇನೆ. ಆದರೂ ಮಾಡಿದ ತಪ್ಪನ್ನು ತಿದ್ದಿಕೊಳ್ಳುವವರೆಗೂ ನನ್ನ ಮನಃಸ್ಥಿತಿ ಅಷ್ಟೇನೂ ಹಿತಕರವಾಗಿರಲಿಲ್ಲ ಎಂದು ಧಾರಾಳವಾಗಿ ಹೇಳಬಹುದು. ಇಂತಹ ಘಟನಾವಳಿಗಳಲ್ಲಿ ಅತ್ಯಂತ ಪ್ರಮುಖ ಘಟನೆ 1948 ನೇ ಇಸವಿಯ ಅಕ್ಟೋಬರ್ ಹದಿನೆಂಟರಂದು ನಡೆದುಹೋಯಿತು. ಆ ದಿನ ಚಾರಿತ್ರಿಕವಾಗಿಯೂ ಮುಖ್ಯವಾದ ದಿನವಾಗಿದ್ದರಿಂದ ಅದನ್ನು ಮರೆಯುವಂತೆಯೇ ಇಲ್ಲ.

ಆಗ ನನಗೆ ಹದಿಮೂರು ವರ್ಷ. ಶಿವಮೊಗ್ಗೆಯ ಕನ್ನಡ ಪ್ರೌಢಶಾಲೆಯಲ್ಲಿ ನನ್ನ ಓದು. ಆಧುನಿಕ ವಿಜ್ಞಾನದ ಪರಿಚಯ ನಮಗೆ ''ರಸಾಯನಿಕ ಶಾಸ್ತ್ರ'', ''ಭೌತಶಾಸ್ತ್ರ''ಗಳ ಮೂಲಕವೇ ಆಗುತ್ತಿತ್ತು. ಶಾಲೆಯನ್ನು ಯಾವುದೋ ಬಾಡಿಗೆ ಜಾಗದಲ್ಲಿ ನಡೆಸುತ್ತಿದ್ದರು. ನಮ್ಮ ಹೆಡ್ಮಾಸ್ಟರು ವಿಶ್ವೇಶ್ವರಯ್ಯನವರ ಕ್ಲೋನ್. ಮುಖವನ್ನೆಲ್ಲಾ ಕನ್ನಡಕ, ಪೇಟಗಳೇ ಆವರಿಸಿಕೊಂಡಿದ್ದವು. ಹೇಳಿಕೊಳ್ಳುವಂತಹ ದೇಹವೇನೂ ಇಲ್ಲದ್ದರಿಂದ ಸ್ಕೂಲಿನಲ್ಲೆಲ್ಲಾ ತಲೆಯ ಓಡಾಟವೇ ಎದ್ದು ಕಾಣುತ್ತಿತ್ತು.

ನಮ್ಮ ಸ್ಕೂಲಿನ ವಾರ್ಷಿಕೋತ್ಸವವನ್ನು ನಡೆಸಲು ಆಗತಾನೇ ಹೊಸದಾಗಿ ಕಟ್ಟಿದ್ದ 80 ಅಡಿ, 40 ಅಡಿಗಳ ಭವ್ಯ ಕಟ್ಟಡ ''ಕರ್ನಾಟಕ ಭವನ''ವನ್ನು ಆರಿಸಿಕೊಂಡಿದ್ದರು. ಆ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ನಮ್ಮ ಶಿವಮೊಗ್ಗೆಯವರೇ ಆದ ಲೋಕಸಭೆಯ ಡೆಪ್ಯುಟಿ ಸ್ಪೀಕರ್ ಅವರು ಬಂದಿದ್ದರು.

ವಾರ್ಷಿಕೋತ್ಸವ, ಎಲ್ಲಾ ಸ್ಕೂಲ್ ಸಮಾರಂಭಗಳಂತೆ, ಅದ್ದೂರಿಯಾಗಿಯೇ ಪ್ರಾರಂಭವಾಯಿತು. ಅಪಸ್ವರದ ''ವಂದೇ ಮಾತರಂ'' ಅರೆ ಬತ್ತಲೆಯ ಭಾರತ ಮಾತೆ, ಗುಂಡು ಗುಂಡಗಿನ ಮಹಾತ್ಮ ಗಾಂಧಿ, ಮುಖಕ್ಕೆ ಸುಣ್ಣ ಬಳಿದುಕೊಂಡ ಚೆಣ್ಣರು ತ್ರಿಶೂಲ ಕಂಡೊಡನೆ ಓಡಿಹೋಗುವ ದೃಶ್ಯ ಇವೆಲ್ಲಕ್ಕೂ ಧಾರಾಳವಾಗಿ ಚಪ್ಪಾಳೆ, ಒನ್ಸ್‌ಮೋರ್‌ಗಳು ದೊರಕಿದವು.

ಇವೆಲ್ಲ ಮುಗಿದ ನಂತರ ನನ್ನ ಪ್ರದರ್ಶನ.

ನಾನು ಆ ಸಂಜೆಯ ಮಹತ್ವದಿಂದ ಪ್ರಭಾವಿತನಾಗಿ ಆಶುಪ್ರದರ್ಶನ ಕೊಟ್ಟೆನೋ ಅಥವಾ ಮೊದಲೇ ಯೋಜಿಸಿ, ತಯಾರು ನಡೆಸಿ ವೇದಿಕೆಗೆ ಬಂದೆನೋ ಈಗ ಮರೆತುಹೋಗಿದೆ. ಬಹುಶಃ ಆ ಕಾರ್ಯಕ್ರಮ ಪೂರ್ವ ಯೋಜಿತವಾದದ್ದೇ ಇರಬೇಕು. ಏಕೆಂದರೆ ನಾನು ಅಂದು ಒಂದು ಟಾಪ್ ಹ್ಯಾಟ್ ಧರಿಸಿ, ಕೈಯ್ಯಲ್ಲಿ ವಾಕಿಂಗ್ ಸ್ಟಿಕ್ ಹಿಡಿದು ಬಂದಿದ್ದೆ.

ಇನ್ನು ನನ್ನ ಪ್ರದರ್ಶನದ ಘನ ಉದ್ದೇಶದ ಬಗ್ಗೆ ಹೇಳಬೇಕಾದರೆ, ಖಂಡಿತ ಅದರ ಹಿನ್ನೆಲೆಯಲ್ಲಿ ಒಂದು ನಿರ್ದಿಷ್ಟ ಫಿಲಾಸಫಿಯೇನೂ ಇದ್ದಿರಲಿಲ್ಲ. ಆ ಮುಂಚೆ ನಡೆದ ಪ್ರದರ್ಶನಗಳ ಕಳಪೆ ಮಟ್ಟ ಸಹಾ ನನ್ನ ಉದ್ದೇಶದ ಮೇಲೆ ಯಾವ ಪರಿಣಾಮವನ್ನೂ ಬೀರಿರಲಿಲ್ಲ. ಮುಖ್ಯವಾಗಿ ಸಿನಿಮಾದಿಂದ, ಅದರಲ್ಲೂ ರಾಮಚಂದ್ರರ ಸಂಗೀತದಿಂದ ನಾನು ಪ್ರಭಾವಿತನಾಗಿದ್ದೆ.

''ಷೆಹ್ನಾಯ್'' 1947ರಲ್ಲಿ ಬಿಡುಗಡೆಯಾಗಿತ್ತು. 1948ರ ಆದಿಭಾಗದಲ್ಲಿ ಆ ಚಿತ್ರ ಶಿವಮೊಗ್ಗೆಗೆ ಬಂದಿತ್ತೆಂದು ಕಾಣುತ್ತದೆ. ಇಲ್ಲವಾದರೆ, ಆ ಸಂಜೆ,

ಮುಖಕ್ಕೆ ಪೌಡರ್ ಬಳಿದುಕೊಂಡು, ಟಾಪ್ ಹ್ಯಾಟ್ ಧರಿಸಿ, ಕೈಯ್ಯಲ್ಲಿ ವಾಕಿಂಗ್ ಸ್ಟಿಕ್ ಹಿಡಿದು. ''ಆನಾ ಮೇರೆ ಜಾನ್ ಸಂಡೇ ಕಿ ಸಂಡೇ'' ಎಂದು ಹಾಡುತ್ತಾ ನಾನು ವೇದಿಕೆಯ ಮೇಲೆ ಪ್ರವೇಶಿಸುವುದಕ್ಕೆ ಕಾರಣವಾದರೂ ಏನಿದ್ದೀತು? ನಾನು ಅಂದು ಕಾಲುಗಳನ್ನು ಝಾಡಿಸಿ, ವೇದಿಕೆಯ ಮೇಲೆಲ್ಲಾ ಓಡಾಡಿ ರಂಪ ಎಬ್ಬಿಸಿರಬೇಕೆಂದು ಕಾಣುತ್ತದೆ. ಇವತ್ತಿಗೂ ಕೇಳಿಸಿಕೊಂಡರೆ ನಾಚಿಕೆಯಾಗುವಂತಹ ಹಾಡು ಅದು. ಮೊದಲೇ ಕೆಟ್ಟ ಸಾಹಿತ್ಯ, ಅದರ ಮೇಲೆ ತೀರಾ ಕಳಪೆ ಸಂಗೀತ. ಎಲ್ಲಕ್ಕಿಂತ ಹೆಚ್ಚಾಗಿ ನಲವತ್ತರ ದಶಕದ ಸ್ವಾತಂತ್ರ್ಯ ಹೋರಾಟದ ಬಿಸಿ ತಟ್ಟಿದ್ದ ಶಿವಮೊಗ್ಗೆಯಲ್ಲಿ ನನ್ನ ಆ ಹಾಡು, ಊಟದ ಥಾಲಿಯಲ್ಲಿ ಬೀಫ್ ಬಡಿಸಿದಂತಿತ್ತು.

ನಾನಂತೂ ಬಹು ಉತ್ಸಾಹದಿಂದ ವೇದಿಕೆಯ ಮೇಲೆ ನನ್ನ ಹಾಡನ್ನು ''ಹಾಡು''ತ್ತಿದ್ದೆ. ಮುಜುಗರದ ಮೌನ ಸಭೆಯನ್ನು ಆವರಿಸಿತ್ತು. ಕೆಲವರಂತೂ ವೇದಿಕೆಯ ಮೇಲೆ ಏನೂ ಆಗುತ್ತಿಲ್ಲವೆಂಬಂತೆ ನಟಿಸುತ್ತಾ ತಮ್ಮ ತಮ್ಮಲ್ಲೇ ಮಾತುಕತೆ ಆರಂಭಿಸಿದ್ದರು. ಡೆಪ್ಯುಟಿ ಸ್ಪೀಕರ್ ಅವರನ್ನು ಮಾತಿಗೆಳೆಯಲು ನಮ್ಮ ಹೆಡ್ಮಾಸ್ಟರ್ ಭಗೀರಥ ಪ್ರಯತ್ನ ನಡೆಸುತ್ತಿದ್ದುದು ನನಗೆ ವೇದಿಕೆಯ ಮೇಲಿನಿಂದಲೇ ಕಂಡಿತು. ಮಕ್ಕಳು ಕಿರಿಚಾಡಲು ತೊಡಗಿದವು. ಸೈಡ್ ವಿಂಗ್‌ಗಳಲ್ಲಿ ಬಿರುಸಿನ ಚಟುವಟಿಕೆ ಕಾಣಿಸಿತು. ಯಾರೋ ಹಲವರು ಕರ್ಟನ್‌ಗಳನ್ನು ಕೆಳಗಿಳಿಸಲು ನೋಡಿದರು. ಕೆಳಗಿಳಿಸಬೇಕಾದ ಸಮಯದಲ್ಲೇ ಕೈ ಕೊಡುವ ಕರ್ಟನ್ ಹಗ್ಗಗಳು ಈಗ ಜಗ್ಗಿದರೆ ಮಣಿಯುತ್ತವೆಯೇ. ನನ್ನ ಹಾಡು ನಿರ್ವಿಘ್ನವಾಗಿ ಸಾಗಿತು.

ಕೊನೆಗೆ ನನ್ನ ಪ್ರದರ್ಶನ ಮುಗಿದಾಗ ಸಭೆಯಲ್ಲಿ ಸ್ಮಶಾನ ಮೌನ. ಮುಂದಿನ ಕಾರ್ಯಕ್ರಮ ನಡೆಸಲು ಯಾರೂ ಮುಂದೆ ಬರಲಿಲ್ಲ. ಅದೂ ಸಹಜವೇ ಅನ್ನಿ. ನನ್ನ ಪ್ರತಾಪದ ಪ್ರದರ್ಶನದ ನಂತರ ಯಾವ ಲಂಗ ಜಂಪರ್ ಹುಡುಗಿ ತಾನೇ ''ಕೃಷ್ಣಾ ನೀ ಬೇಗನೆ ಬಾರೋ'' ಹಾಡಲು ಧೈರ್ಯ ಮಾಡಿಯಾಳು.

ನನ್ನ ಏಕೈಕ ಪ್ರದರ್ಶನ ಸಭೆಯ ಮಿಕ್ಕ ಇನ್ನೆಲ್ಲ ಕಲಾಪಗಳನ್ನು ನಿಲ್ಲಿಸುವ ಯತ್ನದಲ್ಲಿ ಯಶಸ್ವಿಯಾಯಿತು. ನನ್ನ ಮೆಚ್ಚಿನ ಹೆಡ್ಮಾಸ್ಟರ್, ಮುಖ್ಯ ಅತಿಥಿಗಳನ್ನು ಸಮಾಧಾನ ಮಾಡಲು ವ್ಯರ್ಥ ಯತ್ನ ನಡೆಸಿದ್ದರು. ಅತಿಥಿಗಳಿಗೆ ನಿಜಕ್ಕೂ ಕೋಪ ಬಂದಿರಬೇಕು. ಹೇಳಿ ಕೇಳಿ ಸ್ವಾತಂತ್ರ್ಯ ಸೇನಾನಿ. ಭಾಷಣ ಮಾಡದೇ ಅವರು ಹೊರಟು ಹೋದರು. ಹೆಡ್ಮಾಸ್ಟರ್ ವಿಮನಸ್ಕರಾಗಿ ತಮ್ಮ ಜಾಗಕ್ಕೆ ಬಂದರು. ನನ್ನ

ಹಲವು ಹಿತೈಷಿಗಳು ಅವರನ್ನು ಸಮಾಧಾನ ಮಾಡಲು ಯತ್ನಿಸಿದರು. ''ಪಾಪ, ಹುಡುಗ ತಿಳೀದು'' ಎಂದು ಕೆಲವರು ಹೇಳಿದರೆ ನಮ್ಮ ಕ್ಲಾಸ್ ಮಾನಿಟರ್ ನನ್ನನ್ನು ಗೋಡ್ಸೆಗೆ ಹೋಲಿಸಿ ಗಾಂಧಿ ಗೋಡ್ಸೆಯನ್ನು ಕ್ಷಮಿಸಿದಂತೆ ಹೆಡ್ಮಾಸ್ಟರ್ ನನ್ನನ್ನು ಕ್ಷಮಿಸುವಂತೆ ಬೇಡಿಕೊಳ್ಳುತ್ತಿದ್ದ.


ರಾಮಚಂದ್ರರಿಂದ ರಚಿಸಲ್ಪಟ್ಟು, ನನ್ನಿಂದ ಸಾದರಗೊಂಡ ಆ ಕಲಸುಮೇಲೋಗರ ಇಂಗ್ಲೀಷ್-ಹಿಂದಿ ಎಕ್ಸ್ಟ್ರಾವಗಾನ್ಜಾದ ಧಾಳಿಯಿಂದ ಕನ್ನಡ ನಾಡಿನ ಕೇಂದ್ರ ಪ್ರದೇಶದ ಕನ್ನಡ ಶಾಲೆಯೊಂದರಲ್ಲಿನ ಜನಸಮೂಹ ನಿಜಕ್ಕೂ ತತ್ತರಿಸಿತು.

ಅಷ್ಟು ಹೊತ್ತಿಗೆ ನಮ್ಮ ಮಾನಿಟರ್ ಉತ್ಸಾಹದಿಂದ ಓಡುತ್ತಾ ಬಂದು ಹೆಡ್ಮಾಸ್ಟರ್ ಕಿವಿಯಲ್ಲಿ ಏನೋ ಉಸುರಿದ. ಹೈದರಾಬಾದಿನಲ್ಲಿ ನಮ್ಮ ಸೇನೆ ರಜಕಾರರ ವಿರುದ್ಧ ಧಾಳಿ ನಡೆಸಿ ಮೇಲುಗೈ ಪಡೆದ ಸಂಗತಿಯನ್ನು ರೇಡಿಯೋದಲ್ಲಿ ಬಿತ್ತರಿಸುತ್ತಿದ್ದರಂತೆ. ವಲ್ಲಭ ಭಾಯಿ ಪಟೇಲರ ಧೀರ ನಿಲುವಿನಿಂದ ಹೈದರಾಬಾದಿಗೆ ಸ್ವತಂತ್ರ ಸಿಗುವ ಘಳಿಗೆ ಹತ್ತಿರವಾಗಿತ್ತು. 1948ರ ಅಕ್ಟೋಬರ್ ಹದಿನೆಂಟು ನಿಜಕ್ಕೂ ನಾಡಿನ ಸುವರ್ಣ ದಿನವಾಗಿತ್ತು. ತುಂಬಿಬಂದ ದೇಶಭಕ್ತಿಯಿಂದ ಸಭೆ ಎದ್ದು ನಿಂತು ''ವಂದೇ ಮಾತರಂ'' ಹಾಡಿದರು. ''ಜನಗಣಮನ''ದ ನಂತರ ಸಭಿಕರು ಸಂತಸದಿಂದ ಮನೆಗಳಿಗೆ ತೆರಳಿದರು. ದೇವರ ದಯೆ, ಕೊನೆಗೂ ವಾರ್ಷಿಕೋತ್ಸವ ಯಶಸ್ವಿಯಾಗಿ ಮುಕ್ತಾಯವಾಯಿತು.

ಸುಮಾರು ಮೂವತ್ತು ವರ್ಷಗಳ ನಂತರ, ನನಗೆ ಪುನಃ ನಮ್ಮ ಹೆಡ್ಮಾಸ್ಟರನ್ನು ಭೇಟಿ ಮಾಡುವ ಅವಕಾಶ ಒದಗಿ ಬಂತು. ಮೊದಲೇ ಕೃಶ ಕಾಯರಾಗಿದ್ದ ಅವರು ತಮ್ಮ ಎಪ್ಪತ್ತೈದನೇ ವಯಸ್ಸಿನಲ್ಲೂ ಶಾಲೆಯಲ್ಲಿ ಪಾಠ ಹೇಳುತ್ತಿದ್ದರು. ದೇಹ ಹಣ್ಣಾಗಿತ್ತು. ನಾನು ಅವರ ಮನೆಗೆ ಹೋದ ಕೂಡಲೇ ನನ್ನನ್ನು ಗುರುತಿಸಿ ಹಸನ್ಮುಖರಾದರು. ನಿಧಾನವಾಗಿ ಹಳೆಯ ಕಥೆಯನ್ನು ನೆನಪಿಸಿ, ಅನಂತರ ಅವರ ಕ್ಷಮೆ ಕೇಳುವ ನನ್ನ ಯೋಚನೆ, ಅವರನ್ನು ಕಂಡ ತಕ್ಷಣ ಮುರಿದು ಬಿತ್ತು. ಮೂವತ್ತು ವರ್ಷಗಳ ಹಿಂದೆ ಮಾಡಿದ ತಪ್ಪಿಗೆ, ಒಮ್ಮೆಲೇ ನಾನು ''ಸಾರಿ'' ಎಂದೆ. ಅವರು ನನ್ನ ತಪ್ಪನ್ನು ಸ್ವಲ್ಪವೂ ಮನಸ್ಸಿಗೆ ತೆಗೆದುಕೊಳ್ಳದೆ, ಪ್ರೀತಿ ವಿಶ್ವಾಸಗಳಿಂದ ನನ್ನ ಕೈಹಿಡಿದು ಒಂದೆರಡು ಒಳ್ಳೆಯ ಮಾತುಗಳನ್ನಾಡಿದರು. ತಮಗಾದ ಕ್ಲೇಶವನ್ನು ಅವರು ಸಂಪೂರ್ಣವಾಗಿ ಕ್ಷಮಿಸಿ, ನಮ್ಮ ಗುರು ಶಿಷ್ಯ ಸಂಬಂಧವನ್ನ ಪುನಃ ಚಾಲನೆಗೆ ತಂದಂತಿತ್ತು ಅವರ ಮಾತು.

ಜೀವನ ವಿಚಿತ್ರ. ಅನೇಕ ಬಾರಿ, ಅದು ಎಂದೋ ನಡೆದುಹೋದ ಘಟನೆಯನ್ನ ಪುನಃ ನಮ್ಮ ಕಣ್ಣಮುಂದೆ ತಂದು ನಿಲ್ಲಿಸಿಬಿಡುತ್ತದೆ. ಆ ಕ್ಷಣದ ಮಟ್ಟಿಗೆ ಕಾಲ ಸ್ಥಬ್ಧ.

ನಮ್ಮ ಹೆಡ್ಮಾಸ್ಟರ ಮನೆಯಿಂದ ಹೊರಬಂದಾಗ ಸಂಜೆಯಾಗಿತ್ತು. ಶಿವಮೊಗ್ಗೆಯ ಸಂಧ್ಯಾಕಾಲ, ಮನೆಗೆ ಹಿಂತಿರುಗುತ್ತಿದ್ದ ಹಸುಗಳ ಕಾಲಧೂಳಿಗೆ ಎಂದಿನಂತೆ ಬಣ್ಣದ ಮೆರಗು ನೀಡಿತ್ತು. ಜೀವನದ ಮಧುರ ಕ್ಷಣಗಳನ್ನು ನಮಗೆ ಬೇಕಾದಂತೆ ಪುನಃ ಅನುಭವಿಸುವ ಬಳುವಳಿಗಾಗಿ ಕೃತಜ್ಞತಾಭಾವದಿಂದ ನನ್ನ ಹೃದಯ ತುಂಬಿ ಬಂದಿತು.



"ಸರಿಯಾಗಿದೆ"

ಬದುಕಿದ್ದೂ ಸತ್ತವರು

– ಇಂದಿರಾ ಮೂರ್ತಿ

ಇದು ಒಸಾಮಾ ಬಿನ್ ಲಾಡೆನ್ ಅಥವಾ ವೀರಪ್ಪನ್ ಬಗ್ಗೆ ತಾನೇ ಎಂದು ನೀವು ಹುಬ್ಬೇರಿಸಿದರೆ ತಪ್ಪಿಲ್ಲ. ಏಕೆಂದರೆ ಅವರುಗಳೂ ಈ ಜಾತಿಗೆ ಸೇರಿರುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ನಂಬಿದರೆ ನಂಬಿ ಇಲ್ಲದಿದ್ದರೆ ಬಿಡಿ. ಸಾವು-ಬದುಕು, ಮೇಲೆ - ಕೆಳಗೆ, ಕಪ್ಪು-ಬಿಳುಪು, ಒಳಗೆ-ಹೊರಗೆ, ಹಿಂದೆ-ಮುಂದೆ ಇಂತಹ ವಿರುದ್ಧ ಗುಣಗಳು ಏಕಕಾಲದಲ್ಲಿರುವ ವಿಚಿತ್ರ ಸಾಧ್ಯತೆಯನ್ನು ನಾವು ಒಪ್ಪಿದರೆ ಮಾತ್ರ ನಮ್ಮ ಪ್ರಪಂಚ ಹೀಗೇಕಿದೆ ಎಂದು ತಿಳಿಯುವುದು. ನೀವೇನಾದರೂ 'ಕ್ವಾಂಟಂ ಮೆಕ್ಯಾನಿಕ್' ಆಗಿದ್ದರೆ ನಿಮಗಿದು ತಿಳಿದೇ ಇದೆ. ಇಲ್ಲವೋ ಸುಮಾರು ನೂರು ವರ್ಷಗಳ ಹಿಂದೆ ಹುಟ್ಟಿದ ಕ್ವಾಂಟಂ ಸಿದ್ಧಾಂತದಿಂದಾದ ದುರ್ದೈವವೋ ಕರ್ಮವೋ ಇದು ಎಂದೇ ತಿಳಿಯಿರಿ. ಈ ಸಿದ್ಧಾಂತ ನಂಬಲಸಾಧ್ಯ ಎನ್ನಿಸಿದರೂ, ಅದಿಲ್ಲದೆ ನಮಗೆ ಆಕಾಶ ಏಕೆ ನೀಲಿ, ಹಸುರಲ್ಲ; ನೀರಿಗೇಕೆ ಬಣ್ಣವಿಲ್ಲ; ಲೋಹಗಳ ಹೊಳಪು ಮರದ ವಸ್ತುಗಳಿಗಿಲ್ಲವೇಕೆ; ಕಂಪ್ಯೂಟರ್‌ಗಾಗಿ ಬೇಕಾದ್ದು ಸಿಲಿಕಾನ್ ಹೊರತು ಉಕ್ಕಲ್ಲ ಇವೆಲ್ಲ ಅರ್ಥವಾಗುವಂತಿಲ್ಲ.

ಈ ಸಿದ್ಧಾಂತದ ಒಂದು ನಿಯಮ, ಎಲ್ಲ ವಸ್ತುಗಳಿಗೂ, ನಾವು ನೀವೂ ಸೇರಿದಂತೆ, ನಮ್ಮ ಕಣ್ಣಿಗೆ ನೇರವಾಗಿ ಕಾಣದ ಸ್ವರೂಪವೊಂದಿದೆ. ಉಹ್ಞೂ, ಆತ್ಮವಲ್ಲ, ಅಲೆಯ ಸ್ವರೂಪ. ನಮ್ಮ ಗಾತ್ರ ಚಿಕ್ಕದಾದಷ್ಟೂ ನಮ್ಮ ಅಲೆಯ ಸ್ವರೂಪದ ಮಹತ್ವ ಹೆಚ್ಚು. ನಾವೇನಾದರೂ ಕುಗ್ಗುತ್ತಾ ಹೋಗಿ ಅಣುಗಳ ಗಾತ್ರಕ್ಕೇ ಇಳಿದೆವೆನ್ನಿ. ಆಗ ನಮ್ಮ ಅಲೆಗಳಿಂದಾಗುವ ಅನಾಹುತಗಳನ್ನು ನಾವು ಊಹಿಸಲಾರೆವು. ಈ ಸ್ಥಿತಿಯಲ್ಲಿ ನಾವೊಂದು ಕವಲು ದಾರಿಗೆ ಬಂದೆವೆನ್ನಿ. ಎರಡರಲ್ಲಿ ಒಂದು ದಾರಿ ಹಿಡಿದು ಹೋಗುವುದು ಸಾಮಾನ್ಯ ತಾನೇ? 'ಅಲೆ'ಮಾರಿಯ ರೂಪದಲ್ಲಿ ನಾವು ಎರಡೂ ದಾರಿಗಳನ್ನು ಒಂದೇ ಕಾಲದಲ್ಲಿ ಹಿಡಿದು ಹೋಗಲು ಸಾಧ್ಯ. ಸಾಧ್ಯ ಮಾತ್ರವಲ್ಲ. ನಾವು ಮಾಡುವುದೂ ಅದನ್ನೇ. ಒಂದು ಬೆಳಕಿನ ಕಣ ಅಥವಾ ಪರಮಾಣು ಮಾಡುವುದನ್ನೂ ಇದನ್ನೇ. ಕ್ವಾಂಟಂ ಸಿದ್ಧಾಂತದ ಪ್ರಕಾರ ಸೂಕ್ಷ್ಮ ಪ್ರಪಂಚದಲ್ಲಿ ಖಚಿತತೆಯಿಂದ ಏನನ್ನೂ ಹೇಳಲಸಾಧ್ಯ. ಇಲ್ಲಿ ಸಂಭವನೀಯತೆಗೇ ಹೆಚ್ಚು ಒತ್ತು. ಯಾವುದೇ ಘಟನೆಗೆ ಎರಡು ಸಾಧ್ಯತೆಗಳಿವೆಯೆನ್ನಿ. ನಾವು ಪ್ರಯೋಗದ ಮೂಲಕ ನಿರ್ಧರಿಸುವ ಮುನ್ನ, ಇವೆರಡೂ ಸಾಧ್ಯತೆಗಳನ್ನು ಹೊಂದಿದ ಒಂದು ವಿಲಕ್ಷಣ ಸ್ಥಿತಿಯಲ್ಲಿದೆ ಅದು ಎನ್ನುವುದು ಕ್ವಾಂಟಂ ಸತ್ಯ. ಆಟಗಾರ ಒದ್ದ ಚೆಂಡು ಗೋಲಿನ ಹೊರಗೂ

ಒಳಗೂ ಏಕಕಾಲದಲ್ಲಿ ಹೋಯಿತು ಎಂದರೆ, ಭೂತಚೇಷ್ಟೆ ಅನ್ನಿಸುವುದು ಸಹಜವೇ. ಆದರೆ ಚೆಂಡು ಪರಮಾಣು ಪ್ರಪಂಚದ್ದಾಗಿದ್ದರೆ ಇದು ಅನಿವಾರ್ಯವೇ.

ಶ್ರೋಡಿಂಜರ್ ಎಂಬ ಖ್ಯಾತ ಭೌತವಿಜ್ಞಾನಿ ಇಂತಹ ಇಲ್ಲೂ-ಅಲ್ಲೂ ಅಲ್ಲುವ ಸ್ಥಿತಿಯನ್ನು ಬಣ್ಣಿಸಲು ಬೆಕ್ಕೊಂದನ್ನು ಬಳಸಿದ್ದಾನೆ. ಈ ನತದೃಷ್ಟ ಬೆಕ್ಕು ಪೆಟ್ಟಿಗೆಯೊಂದರಲ್ಲಿ ಭದ್ರವಾಗಿ ಬಂಧಿಸಲ್ಪಟ್ಟಿದೆ. ಒಳಗಡೆ ವಿಷಕಾರಕ ಅನಿಲದ ಭರಣಿಯೂ ಇದೆ. ಪೆಟ್ಟಿಗೆಯಲ್ಲಿನ ಮತ್ತೊಂದು ವಸ್ತು ವಿಕಿರಣ ಸೂಸುವ ಪದಾರ್ಥ. ಒಂದು ಘಂಟೆಯಲ್ಲಿ ಒಂದು ವಿಕಿರಣ ಹೊರಬಿದ್ದು, ತನ್ಮೂಲಕ ಭರಣಿಯಿಂದ ವಿಷಾನಿಲ ಹೊರಬಿದ್ದು ಬೆಕ್ಕು ಕೂಡಲೇ ಸಾಯುವ ಸಂಭವನೀಯತೆ ಶೇ. 50. ಆದರೆ ವಿಕಿರಣ ಹೊರಬೀಳದಿರುವ ಸಂಭವನೀಯತೆಯೂ ಶೇ. 50 ನಾವು ಪೆಟ್ಟಿಗೆಯ ಮುಚ್ಚಳ ತೆಗೆದು ನೋಡುವ ತನಕ, ಬೆಕ್ಕಿನ ಸ್ಥಿತಿ ಏನು ಎನ್ನುವ ಪ್ರಶ್ನೆಗೆ ಉತ್ತರ ಅದು ಶೇ. 50 ಸತ್ತಿರುವ ಶೇ. 50 ಬದುಕಿರುವ ಸ್ಥಿತಿಯಲ್ಲಿರಬೇಕು ಎನ್ನುವುದೇ.

ಕ್ವಾಂಟಂ ಸಿದ್ಧಾಂತದ ಈ ವಿಚಿತ್ರ ಸಾಧ್ಯತೆಯ ಮೂಲಕವೇ ನಾವು ಚಿನ್ನ, ಬೆಳ್ಳಿಯ ಹೊಳಪು ಮರಕ್ಕಿಲ್ಲದಿರುವುದು, ಸಿಲಿಕಾನ್‌ನಂತಹ ಅರೆ ವಾಹಕಗಳು ಟ್ರಾನ್ಸಿಸ್ಟರ್‌ನಲ್ಲಿ ಮಾಡುವ ವಿಧಾನ (ಅಂದರೆ ನಮ್ಮ ಕಂಪ್ಯೂಟರ್, ಟಿವಿ ಇತ್ಯಾದಿಗಳು ಕೆಲಸ ಮಾಡುವ ಬಗೆ) ಎಲ್ಲವನ್ನೂ ಅರ್ಥೈಸಿರುವುದು. ಅತ್ಯಾಶ್ಚರ್ಯದ ವಿಷಯವೆಂದರೆ ಮುಂಬರುವ ದಿನಗಳಲ್ಲಿ ನಮಗೆ ಸಿಗುವ, ಇಂದಿನ ಕಂಪ್ಯೂಟರ್‌ಗಳಿಗಿಂತ ಬೇರೆಯೇ ರೀತಿಯಲ್ಲಿ, ಅತ್ಯಂತ ಚುರುಕಾಗಿ ಕೆಲಸ ಮಾಡುವ ಕ್ವಾಂಟಂ ಕಂಪ್ಯೂಟರ್ ಇಂತಹ ಅರ್ಧಜೀವೀಶ್ವರರನ್ನೇ ಬಂಡವಾಳವಾಗಿ ಹೊಂದಿವೆ. ಅಂದರೆ ಸತ್ತೂ ಬದುಕಿರುವ ಸಾಧ್ಯತೆ ನೂರಕ್ಕೆ ನೂರರಷ್ಟು ಸತ್ಯ.

ಏನಿಲ್ಲಿ, ಏನಲ್ಲಿ,

ಗದ್ದಲವೋ ಗದ್ದಲ

ಕನ್ನಡ ಅಂಕಿಗಳ

ಗುರುತಿಸುವ ಗೊಂದಲ

ಎಂ.ಕೆ. ರಾಧಾ

ಸರಸ ಸಂವಾದ - ಒಂದು ವಿಶಿಷ್ಟ ಹಾಸ್ಯಗೋಷ್ಠಿ

- ಹಾಸ್ಯಪ್ರಿಯೆ

ಉಡುಪಿಯ ಸು.ಹಾ.ಸಂ.ನ ಸುಹಾಸೋತ್ಸವದ ಸಂದರ್ಭದಲ್ಲಿ ಇತರ ಕಾರ್ಯಕ್ರಮಗಳೊಂದಿಗೆ ಒಂದು ವಿನೂತನ ಪ್ರಯೋಗವೆನ್ನಬಹುದಾದ ಹಾಸ್ಯ ಗೋಷ್ಠಿಯನ್ನೇರ್ಪಡಿಸಿದ್ದರು. ಹೆಸರೇನೋ 'ಸರಸ-ಸಂವಾದ' ಎಂದಿತ್ತಾದರೂ ಮೊದಲಿಗೆ ಹಾಸ್ಯ ಸಾಹಿತಿಗಳು ಒಂದಿಷ್ಟು ಭಾಷಣ ರೂಪದ ವಿಚಾರ ಮಂಥನ ನಡೆಸಿ ಆ ಬಳಿಕ ಹಾಸ್ಯಪ್ರಿಯ ಸಭಾಸದರು ವಿನೋದ ಬರಹಗಾರರಿಗೆ ಪ್ರಶ್ನೆ ಹಾಕಿ ಆಯಾ ವಿಷಯಗಳ ಚರ್ಚೆ ನಡೆಸಬೇಕೆಂಬ ರೂಪುರೇಷೆ ಸಂಘಟಕರದ್ದಾಗಿತ್ತು. ಒಟ್ಟಾರೆ ಇದು ಹಾಸ್ಯದ ಕುರಿತಾದ ಗಂಭೀರ ಚಿಂತನೆಯ ಒಂದು ಕಾರ್ಯಕ್ರಮವೆಂದರೂ ಸರಿ. ಹಾಸ್ಯ ಏಕೆ, ಎಷ್ಟು, ಏನು, ಎಲ್ಲಿ ಎಂಬ ಬಗ್ಗೆ ಚಿಂತನೆ ನಡೆಸಬೇಕೆಂಬ ದೃಷ್ಟಿಯೂ ಇದ್ದಿರಬಹುದು. ಸಾಮಾನ್ಯ 'ಹೊಟ್ಟೆ ಹುಣ್ಣಾಗಿಸುವ' ಹಾಸ್ಯ ಗೋಷ್ಠಿಗಳಿಗಿಂತ ಭಿನ್ನವಾದ ಗುರಿ ಇಲ್ಲಿತ್ತು.

ಬಾಲಪ್ರತಿಭೆ ಕುಮಾರಿ ಶಿಲ್ಪ ಆರ್. ಶಾಸ್ತ್ರಿ ತನ್ನ ಅಸ್ಖಲಿತ ವಾಣಿಯಿಂದ ಕೆಲವು ಸಂಸ್ಕೃತದ ಹಾಸ್ಯ ಪ್ರಸಂಗಗಳನ್ನು ನಿರೂಪಿಸಿ ಸಭೆಯನ್ನು ಬೆರಗುಗೊಳಿಸಿದಳು. ಯಾವ ವಿಷಯ ಕೊಟ್ಟರೂ ತಾನು ಮಾತನಾಡಬಲ್ಲೆ ಎಂಬುದನ್ನು ತೋರಿಸಿಕೊಟ್ಟಳು.

ಕತೆ ಕಾದಂಬರಿಗಳೊಂದಿಗೆ ಹಾಸ್ಯ ಲೇಖನಗಳನ್ನು ಬರೆಯುತ್ತಿರುವ ಡಾ|| ಜಾನಕಿ ಸುಂದರೇಶ್ ಅವರು ತಮ್ಮ ವೃತ್ತಿ ಜೀವನದ (ಪಶುವೈದ್ಯೆ) ಕೆಲವು ನೈಜ ಘಟನೆಗಳನ್ನು ವಿವರಿಸಿ ಅಲ್ಲಿ ಅಡಗಿರುವ 'ವಿನೋದ'ವನ್ನು ಎತ್ತಿ ತೋರಿಸಿದರು. ಹಳ್ಳಿಗರ ಮುಗ್ಧತೆ ಮತ್ತು ಕಪಟತೆ ಎರಡರಲ್ಲೂ ಹೇಗೆ ಹಾಸ್ಯ ಇಣುಕುತ್ತಿರುತ್ತದೆ ಎಂಬ ಪ್ರತ್ಯೇಕತೆಯನ್ನು ಕೆಲವು ಉದಾಹರಣೆಗಳೊಂದಿಗೆ ವಿವರಿಸಿದರಲ್ಲದೇ ತಮ್ಮ ಶೋಕಿಗಾಗಿ ಸದಾ ಅನಾರೋಗ್ಯದ ಅಪಾಯವಿರುವ ನಾಯಿಮರಿಗಳನ್ನು ಸಾಕುವ ಪಟ್ಟಣವಾಸಿಗಳೊಂದಿಗಿನ ತಮ್ಮ ಅನುಭವದ ತುಣುಕುಗಳಲ್ಲಿರುವ ವಿಡಂಬನೆಯನ್ನು ಹೊರಗೆಡಹಿದರು.

ಕುಂದಾಪುರದ ಹಾಹ್ಹಾ ಹಾಸ್ಯ ಸಂಘದ ಶ್ರೀ ಕೋ.ರ. ಕಾಮತರು ತಮ್ಮ ರಸಭರಿತ ಶೈಲಿಯಲ್ಲಿ ಹಲವಾರು 'ಅಪರೂಪದ ಹಾಸ್ಯ ಚಟಾಕಿಗಳನ್ನು

'ಚುರುಕಾಗಿ, ಚುಟುಕಾಗಿ ಹೇಳಿ ಪ್ರೇಕ್ಷಕರನ್ನು ನಗಿಸುವುದರಲ್ಲಿ ಸಫಲರಾದರು. ಈಗಾಗಲೇ ನೂರಾರು ಕಡೆ ತಮ್ಮ ಕಾರ್ಯಕ್ರಮಗಳನ್ನು ನೀಡಿರುವ ಶ್ರೀ ಕಾಮತರು 'ಗಾಂಭೀರ್ಯ'ದ 'ಹೊಡೆತ'ದಿಂದಾಗಿ ಸಪ್ಪೆ ಎನಿಸಬಹುದಾದ ಈ ವಿಚಾರ ಸಂಕಿರಣಕ್ಕೆ ಹಾಸ್ಯ ಪ್ರವಾಹವನ್ನೇ ನುಗ್ಗಿಸಿ ಎಲ್ಲರೂ ನಗುವಂತೆ ಮಾಡಿ ಒಬ್ಬ ಯಶಸ್ವೀ 'ಜೋಕರ್' ಆಗಿ ಮಿಂಚಿದರು 'ಹಾಸ್ಯಗಾರರಿಗಿಂತ ಹಾಸ್ಯಗಾರ್ತಿಯರೇ ಇಲ್ಲಿ (ವೇದಿಕೆ) ಹೆಚ್ಚು ಸಂಖ್ಯೆಯಲ್ಲಿರುವುದರಿಂದ ತನ್ನ ನಂಬಿಕೆಗೆ ಧಕ್ಕೆ ಬಂದಿದೆ. ಇದುವರೆಗೂ ನಾನು ಸ್ತ್ರೀಯರಿಗಿಂತ ಪುರುಷರಿಗೇ ಹಾಸ್ಯಪ್ರಜ್ಞೆ ಹೆಚ್ಚು ಉಂಟೆಂದು ನಂಬಿದ್ದೆ' ಎಂಬ ಮಾತಿನಿಂದ ವ್ಯಂಗ್ಯದ ಧ್ವನಿಯಲ್ಲೇ ಗಂಭೀರ ಪ್ರಸ್ತಾಪವೊಂದನ್ನು ಮುಂದಿಟ್ಟರು.

ಈಚೆಗೆ ಹೆಚ್ಚಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ಶ್ರೀಮತಿ ಸತ್ಯವತಿ ಹರಿಕೃಷ್ಣ ಅವರು 'ಗಹಗಹಿಸಿ' ನಗುವಷ್ಟಲ್ಲವಾದರೂ ಹೃದಯ ತುಂಬಿ ಮುಗುಳ್ನಗುವಷ್ಟನ್ನು ಸಾಧಿಸುವ ಪುಟ್ಟ ಮಕ್ಕಳ ಪ್ರಪಂಚದ ಕೆಲವಾರು ರಸಪ್ರಸಂಗಗಳನ್ನು ವಿವರಿಸಿ ಅದರ 'ಸವಿ'ಯನ್ನು ಸ್ಪಷ್ಟೀಕರಿಸಿದರು. ಹುಳುಕು ಹಲ್ಲುಗಳನ್ನು ಮಾತ್ರ ತೆಗೆಯಬಲ್ಲ ತನ್ನ (ದಂತವೈದ್ಯ) ಪತಿರಾಯರನ್ನು ಇಲ್ಲಿ ಎಲ್ಲರೂ 'ಹಲ್ಲುದುರಿಸುವ' ಡಾಕ್ಟರ್ ಎಂದು ಬಣ್ಣಿಸುವರೆಂದು ಆಪಾದಿಸಿ, ಇತರರದು ಹೋಗಲಿ, ತನ್ನ ಸ್ವಂತ ಹೆಂಡತಿಯ ಹಲ್ಲುದುರಿಸುವ ಸಾಮರ್ಥ್ಯ(?) ಯಾವ ಗಂಡಸಿಗಿದೆ ಎಂದು ಪ್ರಶ್ನಿಸಿ ಸಭಾಸದರು ಈ ವಿನೋದ ವಾಕ್ಯದ ಕುರಿತಾಗಿ ಗಂಭೀರವಾಗಿ ಯೋಚಿಸುವಂತೆ ಮಾಡಿದರು.

ಹಿರಿಯಕ್ಕನೆಂದೇ ಅಂದಿನ ಮಟ್ಟಿಗೆ ಕರೆಯಲ್ಪಟ್ಟ ಶ್ರೀಮತಿ ಟಿ.ಎಸ್. ಅಂಬುಜಾ ಅವರು ಒಂದು ಸಂಕೀರ್ಣ ಪ್ರಸ್ತಾವನೆಯನ್ನು ಎದುರಿಟ್ಟರು. 'ಹಾಸ್ಯ' ತನ್ನ ಗಡಿ ಮೀರಿದರೆ ಅಶ್ಲೀಲಕ್ಕೆ ತಲುಪಬಹುದು ಎನ್ನುವುದುಂಟು. ಆದರೆ ಈ 'ಗಡಿ' ಯಾವುದು ಎಂಬುದೇ ಪ್ರಶ್ನೆ ಎಂದರು. ಈ ಕುರಿತು ಪುರಾಣದಲ್ಲಿರುವ ಒಂದು ಹಾಸ್ಯ ಪ್ರಸಂಗವನ್ನು ಬಣ್ಣಿಸಿ ಅದನ್ನೇ ಹೋಲುವ ಸಾಮಾಜಿಕ ಹಾಸ್ಯ ತುಣುಕೊಂದನ್ನು ವಿವರಿಸಿ, ಪರಸ್ಪರ ತುಲನೆ ಮಾಡಿ ಇದು ಅಶ್ಲೀಲವೆಂದಾದರೆ, ಅದು ಅಶ್ಲೀಲವಲ್ಲವೇ? ಆ ಸಂಸ್ಕೃತ ಕವಿಗಳೂ ಇದನ್ನು ಗಮನಿಸಿರಲಿಕ್ಕಿಲ್ಲವೇ? ಎಂಬ ಗೊಂದಲವನ್ನು ಮಂಡಿಸಿದರು. ಜಿಜ್ಞಾಸುಗಳಿಗೆ ಆಹಾರವಾಗಬಲ್ಲ ಇಂಥ ಕೆಲವು ಸಂದರ್ಭಗಳನ್ನು ಹೆಕ್ಕಿ ತೆಗೆದಿಟ್ಟರು. ಒಬ್ಬ ಮಹಿಳೆಯ ಬಾಯಿಯಲ್ಲಿ ಬಂದಾಕ್ಷಣ ಗಂಡುಬೀರಿ (ಅಶ್ಲೀಲ) ಎನಿಸುವ ಅದೇ ಪುರುಷನಾಗಿದ್ದರೆ ಆತ 'ರಸಿಕ'ನೆಂಬ ಹೊಗಳಿಕೆಗೆ ಪಾತ್ರನಾಗಬಲ್ಲನೇನೋ ಎಂಬಂಥ ಸನ್ನಿವೇಶಗಳೂ ಅಲ್ಲಿದ್ದವು. ಹಾಸ್ಯದ ಧಾಟಿಯಲ್ಲೇ ಆಗಲಿ, ಸ್ತ್ರೀಯರನ್ನು ಕೇವಲ ಅವರವರ ಪತಿಯ ಅರ್ಹತೆಯ ಆಧಾರದ ಮೇಲೆ ಪರಿಚಯಿಸುವುದಕ್ಕಿಂತ ಆಕೆಯ 'ಸ್ವಂತಿಕೆ'ಗೆ ಹೆಚ್ಚು ಬೆಲೆ ನೀಡಬೇಕೆಂದು ಪರ್ಯಾಯವಾಗಿ ಬಿಂಬಿಸಿದರು.

ಶ್ರೀ ಗುರುರಾಜ ಮಾರ್ಪಳ್ಳಿಯವರು ಅಂದಿನ ಗೋಷ್ಠಿಯ ಅಧ್ಯಕ್ಷರಾಗಿದ್ದು ಎಲ್ಲರ ಮಾತುಗಳ ಸಾರದ ಚರ್ಚೆ ನಡೆಸಿರಲ್ಲದೇ ತಮ್ಮ ಸ್ವಂತ ಅನುಭವದ (ಶ್ರೀ ಬಿ.ವಿ. ಕಾರಂತರೊಂದಿಗೆ ಸಂಗೀತ ನಿರ್ದೇಶನದ ವೇಳೆ) ಹಾಸ್ಯ ಪ್ರಸಂಗವೊಂದನ್ನು ಹೇಳಿ 'ಇದು ಹಾಸ್ಯದ ಯಾವ ವಿಭಾಗದಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ' ಎಂದು ನಗೆ ಬೀರುತ್ತಲೇ ವಿಮರ್ಶೆಗೆ ಆಹ್ವಾನವಿತ್ತರು.

ಸಭಾಸದರಲ್ಲಿ ಹಲವರು ಹಾಸ್ಯದ ಕುರಿತಾದ ಕುತೂಹಲಭರಿತ ಪ್ರಶ್ನೆಗಳನ್ನು ಬರೆದು ತಂದಿದ್ದರೂ ಸಮಯದ ಅಭಾವದಿಂದಾಗಿ ಅವಕಾಶ ಸಿಗದಾಯಿತು. ಶ್ರೀ ಕು.ಗೋ. ಅವರಿಂದ ಕೇಳಲ್ಪಟ್ಟ 'ಹಾಸ್ಯ ಸಾಹಿತಿಗಳು ಹಿರಿಯ ಹಾಸ್ಯ ಬರಹಗಾರರ ಕೃತಿಗಳನ್ನು ಓದಿ ಅವರಿಂದ ಪ್ರಭಾವಿತರಾಗಿ ಬರೆಯುವುದು ಒಳ್ಳೆಯದೇ ಅಥವಾ ಅದ್ಯಾವುದನ್ನೂ ಓದದೆ ತಮ್ಮ ಸ್ವಂತ ನೆಲೆಯಲ್ಲೇ ಬೆಳೆಯುವುದು ಉತ್ತಮವೇ?' ಎಂಬ ಪ್ರಶ್ನೆಗೆ ಬಗೆ ಬಗೆಯ ಉತ್ತರಗಳು ಬಂದುವಾದರೂ 'ಅನುಸರಣೆ ಅಲ್ಲವಾದರೂ ಹಿರಿಯ ಸಾಹಿತಿಗಳ ಹಾಸ್ಯ ಸಾಹಿತ್ಯವನ್ನು ಎಲ್ಲ ನಗೆ ಬರಹಗಾರರು ಕಡ್ಡಾಯವಾಗಿ ಓದಿದರೆ ಮಾತ್ರ ಉತ್ತಮ ಗುಣಮಟ್ಟದ ಹಾಸ್ಯ ಸಾಹಿತ್ಯ ನಿರ್ಮಾಣವಾದೀತು' ಎಂಬ ಅಭಿಪ್ರಾಯಪಟ್ಟರು. ಉತ್ತಮ ಹಾಸ್ಯ ಸಾಹಿತ್ಯವನ್ನು ಒದಗಿಸಿದ ಕೈಲಾಸಂ, ಕಸ್ತೂರಿ, ರಾ.ಶಿ., ರಾಕು, ಪಡುಕೋಣೆ, ಗೊರೂರು, ಪಾವೆಂ ಮೊದಲಾದವರ ಪರಂಪರೆಯನ್ನು ಕಡೆಗಣಿಸದೆ ಶುದ್ಧ ಹಾಸ್ಯ ಸಾಹಿತ್ಯವನ್ನು ನಿರ್ಮಾಣ ಮಾಡುವುದು ಇಂದಿನ ಅವಶ್ಯಕತೆ ಎಂದು ಕು.ಗೋ. ಕರೆ ನೀಡಿದರು.

ಸು.ಹಾ.ಸಂ.ನ ಈ ಕಾರ್ಯಕ್ರಮ ಇತರರಿಗೂ ನವೀನ ಪ್ರಯೋಗಗಳನ್ನು ಹಮ್ಮಿಕೊಳ್ಳುವ ಪ್ರೇರಣೆ ನೀಡಬಹುದಾದಷ್ಟು ಯಶಸ್ವಿಯಾಯಿತು ಎನ್ನಲಡ್ಡಿಯಿಲ್ಲ.

ಒಂದು ಕೊಂಡ್ರೆ

ಇನ್ನೊಂದು ಉಚಿತ

ಜಂಕ್ ಸಾಮಾನ್ ಮನೇಗೆ

ಸೇರೋದು ಖಚಿತ

ಎಂ.ಕೆ. ರಾಧಾ

ಹೀಗೊಂದು ಕಾವ್ಯ ಕಮ್ಮಟ

- ಶಿವು

ಮೊದಲು ರುಚಿಕರ ಉಪ್ಪು ಓಟ್ಟದು
ಅದರ ನಂತರ ಭಾತುಕೇಸರಿ
ಮುದದಿ ತಿನ್ನಲು ಮುಂದೆ ನಡೆದರು ಕವನ ಕಮ್ಮಟರು
ಬದಿಗೆ ಇಟ್ಟಿಹ ಕೆಂಪು ಪಪಯವ
ಹದನು ಚೂರಿಯ ಚುಚ್ಚಿ ತಿನ್ನುತ
ಕುದಿವ ಕಾಫಿಯ ನಗುತ ಕುಡಿದರು ನೆರೆದ ಕಬ್ಬಿಗರು

ನನ್ನಿ ಮಾತಿದು ಸಟೆಯ ನುಡಿಯೆನು
ತಿನ್ನುವಾಟವ ಸಾಕುಮಾಡಿರಿ
ಬನ್ನಿ ಕಲಿಯಲು ಕವನ ರಚನೆಯ ನೆಂದನಾಮಿತ್ರ
ಗನ್ನ ಮಾಡೆವು ನಾವು ಅತಿಥಿಗೆ
ಖಿನ್ನರಾಗಲು ಇಲ್ಲ ಕಾರಣ
ಜನ್ನದಾರದ ಆಣೆ ಇಡುವೆವು ಎಂದಿತಾ ಗಡಣ

ಅಂದು ಬೇಂದ್ರೆಯ ಸಖಿಯ ಗೀತದ
ಒಂದು ವಿವರಣೆ, ಕವಿತೆ ಬರೆಯುವ
ಚಂದ ಕೆಲಸದ ಮಾಟ, ಕಟ್ಟಡ ತಿಳಿವ ಸಂಭ್ರಮವು
ಕಂದ ಪದ್ಯದ ಸೊಬಗು ಸೊಗಡನು
ದಂಡಕವು ಲಘು ಸಾಲು ಪಿಡಿವುದ
ಬಂದ ಜನರಿಗೆ ಅಂದು ತೋರಿಸಿ ತೃಪ್ತಿ ಪಡಿಸಿದರು

ಭಾವ ತುಂಬಿದ ಬೇಂದ್ರೆ ಕವಿತೆಯು
ಜೀವ ಜೀವರ ಸಖ್ಯ ಸಹಚರಿ
ನೋವ ಅನುಭವ ಕಾವು ತೋರುವ ಕಾವ್ಯ ಸಾಲುಗಳು
ನಾವೆ ಬಾಳಿನ ಕುಳಿತು ಅದರಲಿ
ತಾವೆ ಸುಖಿಗಳು ಎನುವ ಬದಲಿಗೆ
ಬೇವಿನಂತಹ ಅಡಿಗ ಕವನವು ಕಮ್ಮಟಕೆ ಶೋಭೆ

ಎನಲು ಶೀನುವು ಹಾಗೆ ಆಗಲಿ
ಕನಲ ಬೇಡಿರಿ ಮುಂದೆ ನಿಮ್ಮಯ
ಮನದಭೀಷ್ಟವ ಬಿಡದೆ ಮಾಡುವುದೊಂದೆ ನಮ್ಮಗುರಿ
ಎನುತ ಬೇಲೂ ರಾಮ ಮೂರ್ತಿಯು
ಜನರ ಗಡಣವ ಸೀಳಿ ನುಗ್ಗುತ
ತನುವ ತಣಿಸಲು ಓಡಿ ಓಡಿದ ಜೆಂಟ್ಸು ಬಾಗಿಲಿಗೆ

ಆರು ಅಕ್ಷರ ಶಿವನ ಪಾದಕೆ
ನೇರ ದಾರಿಯ ಸ್ಫುರಿಸಬಲ್ಲುದು
ತೋರಿ ಮಾರ್ಗವ ಪುಣ್ಯ ಪಡೆದರು ಷಡಕಷರಿಯವರು
ಹರಕೆ ರಮಣರ ಪಡೆದು ಹರ್ಷದಿ
ಗರುವ ಇಲ್ಲದ ಮನವ ಸಾಧಿಸಿ
ನೆರೆದ ಜನಕದು ಮುದದ ಸ್ವಾಗತ ಹೊಟೆಲು ರಮಣಸಿರಿ

ಕಾಲ ಸರಿದುದು ಬೇಂದ್ರೆ ಕವನದ
ಜಾಲ ಮಾಯಾಜಾಲ ಕವಿಚಿದ
ಬಲೆಯ ಸಂತಸದಿಂದ ಸವಿದರು ಭಾವ ಸಮಧಿಯಲಿ
ಗಾಲಿ ಹಚ್ಚಿದ ಗಾಡಿಯಂದದಿ
ಚಾಲು ಸಂದಿರೆ ಕವನ ಪಠಣಕೆ
ಆಲಿಸಿತು ಕವಿಗಡಣ ಪಾತ್ರೆಯ ಟಿಂಟಿಣಿಯ ರವವ

ರೋಟಿ ಇಟ್ಟಿಹ ತವೆಯ ಪಕ್ಕದಿ
ಚಾಟು ಮಸಲೆಯ ಘಮಲ ಸವಿಯುತ
ಘಾಟೆ ಇಲ್ಲದ ಮೆಣಸು ಸಾರನದೆಂತು ಬಣ್ಣಿಪೆನು
ಊಟದಾರ್ಭಟ ಮುಗಿದ ನಂತರ
ಚೋಟು ಬಾಳೆಯ ಹಣ್ಣ ತಿನ್ನುತ
ಘಾಟಿ ಕವಿಗಳು ಕವನ ರಚಿಸದೆ ಮನೆಗೆ ತೆರಳಿದರು

ದೊಣ್ಣೆಗಿಲ್ಲ ಸಾಮರ್ಥ್ಯ

- ಬಿ. ನಾಗೇಂದ್ರ

"ಅಯ್ಯೋ! ಏನು ಮಕ್ಕಳೋ! ಕೇಳಿದ್ದೆಲ್ಲಾ ಕೇಳಿದ ಕ್ಷಣವೇ, ಕೊಡಿಸಿ ಕೊಡಿಸಿ, ಹಾಳಾದವು!" ಎಂದು ಸೊರಗಿದ ತಂದೆ ಪಾಪಣ್ಣ. "ಅಂಕೆ ಇಲ್ಲದ ಕಪಿ ಲಂಕೆ ಸುಟ್ಟಿತು ಅಂತ ಗಾದೆ ಇದೆ. ನಮ್ಮ ಮಕ್ಕಳು ಬಾಲವಿಲ್ಲದ ಹನುಮಂತಗಳೇ ಸರಿ" ಎಂದು ಸ್ಪಂದಿಸಿದಳು ತಾಯಿ ಪದ್ದಮ್ಮ.

ಪಾಪಣ್ಣ ಹಿಂದಿನ ಕಾಲದ ಪೋಲಿಸ್ ಇನ್‌ಸ್ಪೆಕ್ಟರ್ ಮಗ. ಅವನೆಂದ: "ಅಲ್ವೇ! ನಾನು ಎಷ್ಟು ಹೇಳ್ತಿದ್ದೆ! Spare the rod and spoil the child ಅನ್ನುವ ಗಾದೆ ಇಂದಿಗೂ ನಿಜ ಅಂತ! ಕಾಲಕಾಲಕ್ಕೆ ದಂಡಿಸಿದ್ದರೆ ಇವತ್ತು ಇವು ಕೈಗೆ ಸಿಗತಿದ್ವು!"

"ಛೇ ಛೇ! ಮಕ್ಕಳ ಸೈಕಲಾಜಿ ಮೂರುಕಾಸೂ ಗೊತ್ತಿಲ್ರೀ ನಿಮಗೆ! ಹೊಡಸ್ಕೊಂಡಾಗ ಅವು ಹೇಳಿದ ಮಾತು ಕೇಳ್ಬೋದು. ಅದರ ಜೊತೇನೇ negative behavioural reactions ಗೆ ನಾಂದಿ ಆಗತ್ರೀ! ನಾವು ಏನಾದ್ರು ಹೇಳೊಕ್ಕೆ ಮುಂಚೇನೇ ಅವ್ರು ನಮ್ಮೇಲೆ ಬೀಳ್ತಾರೀ! ದೊಡ್ಡೋರಾದಮೇಲೆ ಸಮಾಜಘಾತಕರಾಗ್ತಾರೆ. ಹಿಂಸಾಚಾರಕ್ಕೆ ಹಿಂಜರಿಯೋದಿಲ್ಲ. ಹೆಂಡ್ತಿ ಮಕ್ಕಳನ್ನು ಹೊಡೆಯೋದು, ನಿಮ್ಮ ವಂಶದಲ್ಲಿ, ಸದ್ಯ ನಿಮ್ಮಪ್ಪನ ಕಾಲಕ್ಕೆ ನಿಲ್ಲಲಿ!" ಅಂತ ಮೂದಲಿಸಿದಳು ಪದ್ದಮ್ಮ.

"ಬಿಡೆ ಬಿಡೆ ನಿನ್ನ ಸೈಕಾಲಜಿ ಲೆಕ್ಚರ್ರು! ನಿಮ್ಮಪ್ಪನಿಗೇನಿತ್ತೆ ಸೈಕಲಾಜಿ ಜ್ಞಾನ! ಅವರಿಗಿದ್ದಿದ್ದು ಗಾದೆ ಮೇಲಿನ ವಿಶ್ವಾಸ ಅಷ್ಟೆ! ಈಗ ನೀನೇನಾಗಿದಿ ಹೇಳು." ಅಂತ ಮರು ಮೂದಲಿಸಿದ ಗಂಡ.

"ಏನೋರೀ, ಈ ನಿಮ್ಮಕ್ಳು, ನನಗೆ ದಿನವೂ lump in the throatಉ! ವಾರಕ್ಕೊಮ್ಮೆಯಾದರೂ pain in the neckಉ! ಅದಕ್ಕೇನಾದರೂ solution ಇದೆಯೆ ಚಿಂತಿಸಿ!" ಅಂತ ಸಮಾಧಾನ ತೆಗೆದುಕೊಂಡು ಹೇಳಿದಳು ಹೆಂಡತಿ.

ಪರಮೇಶಿ ಊರಿಂದ ಬಂದಿದ್ದ ಹಿರಿಯ ನೆಂಟ. ಗಂಡ ಹೆಂಡಿರ ಸಂಭಾಷಣೆಗೆ ಸಾಕ್ಷಿಯಾಗಿ ನಿಂತಿದ್ದ. ಬಿಸಿ ಕಡಿಮೆಯಾಗಿದ್ದನ್ನು ಗಮನಿಸಿ ಹಿತ

ವಚನವನ್ನು ನುಡಿದ: ಜಗತ್ತು ಕಾಲಕ್ಕೆ ಸರಿಯಾಗಿ ನಡೀತಿದೆಯಮ್ಮ. ನೀವೂ ಅಪ್ಪ ಅಮ್ಮಂದಿರೂ ಅದರಂತೆ ಇದ್ದೀರಿ ವ್ಯಸನಕ್ಕೇನೂ ಕಾರಣವಿಲ್ಲ. ನೀವು ಚಿಂತಿಸುತ್ತಿರುವುದು ಬೆಳೆಯುತ್ತಿರುವ ಮಕ್ಕಳ ಸಮಸ್ಯೆ. ಬೆಳೆದು, ದುಡಿದು, ಅಳಿಯುತ್ತಿರುವ ಹಿರಿಯರ ಸಮಸ್ಯೆಯೂ ಅಷ್ಟೆ! ಅಂದ.

''ಹಾಗೆಂದ್ರೇನಣ್ಣಾ!'' ಪ್ರಶ್ನಿಸಿದ ಪಾಪಣ್ಣ.

''ನೋಡು ಮಗು! ಕೃತಯುಗದಲ್ಲಿ ಒಬ್ಬ ಶಿಷ್ಯನ ಯೋಗ್ಯತೆ ಹೇಗಿತ್ತೆಂದರೆ, ಅವನು ಗುರುವಿನ ಮುಂದೆ ಕುಳಿತರೆ ಸಾಕು, ಮೌನದಿಂದಲೇ ಅವನಿಗೆ ಜ್ಞಾನದಾನ! ತ್ರೇತಾಯುಗದಲ್ಲಿ ಗುರು ಶಿಷ್ಯನಿಗೆ ಮಾತಿನ ಮೂಲಕ ಉಪದೇಶ ಮಾಡಬೇಕಾಯಿತು! ಮುಂದೆ ದ್ವಾಪರ ಬಂತು! ಗುರು ಶಿಷ್ಯರನ್ನು ದಂಡಿಸಿ ಬೋಧಿಸಬೇಕಾಯಿತು! ಈಗ ಕಲಿಯುಗ, ನಾವಿರುವ ಕಾಲ. ಗುರು ಕೈ ಮುಗಿದು ಶಿಷ್ಯನಿಗೆ ಅರಿಕೆ ಮಾಡಿಕೊಳ್ಳಬೇಕು! ಸಾಧನೆ ಮಾಡು ಅಂತ! ಹಿರಿಯರ ಬಾಳೇ ಹೀಗಿರುವಾಗ, ಕಿರಿಯರ ಬಗ್ಗೆ ಇಷ್ಟು ಏಕೆ ಗೊಣಗಬೇಕು'' ಎಂದು ಉಪಸಂಹಾರಮಾಡಿದ ಪರಮೇಶಿ.

ಇಂತು ಸರ್ವಮ್ ಶಿವಂ

ಹಾಸ್ಯೋತ್ಸವ - 2K2

25-12-2002
ಎಚ್.ಎನ್. ಕಲಾಕ್ಷೇತ್ರ, ಜಯನಗರ

ದಿವಂಗತ ದಾಶರಥಿ ದೀಕ್ಷಿತ್ ಸ್ಮರಣೆಯೊಂದಿಗೆ ಹಾಸ್ಯೋತ್ಸವ 2K2 ಸಿದ್ಧತೆಗಳು ಭರದಿಂದ ಸಾಗಿವೆ.

ಎಂದಿನಂತೆ ಹಾಸ್ಯಭಾಷಣ, ನಗೆತುಣುಕು, ನಗೆನಾಟಕ, ನಗೆ ಗೀತೆಗಳು ನಿಮ್ಮನ್ನು ರಂಜಿಸಲಿವೆ.

ವಿವರಗಳಿಗೆ ಡಿಸೆಂಬರ್ 02 ಸಂಚಿಕೆ ನೋಡಿ

ಬೇಲೂರು ರಾಮಮೂರ್ತಿ   ಕೆ. ಶ್ರೀನಿವಾಸ್

ಸಂಚಾಲಕರು

ಸ್ವ ಸಹಾಯ!

– ಹೆಚ್. ಗೋಪಾಲಕೃಷ್ಣ

'ಕೊನೇ ಸ್ಟಾಪಿನ ಹತ್ತಿರ ಒಂದು ಹೊಸಾ ಸೆಲ್ಫ್ ಸರ್ವೀಸ್ ಹೋಟಲ್ಲು ಓಪನ್ನಾಗಿದೆಯಂತೆ. ಬಾ ಅಲ್ಲೇ ಕಾಫಿ ಹಾಕೋಣ' ಅಂದ ರಾಜು. 'ನಮ್ಮೇರಿಯಾವಲ್ಲಿ ಅದ್ಯಾರಪ್ಪಾ, ಹೋಟಲು ಓಪನ್ ಮಾಡಿರೋರು?' ಅಂತ ಆಶ್ಚರ್ಯ ತೋರಿಸಿದೆ. ಲೇಬರ್ ಕಾಲೋನಿ ನಮ್ಮ ಏರಿಯಾ. ಹತ್ತು ವರ್ಷದಲ್ಲಿ ಎಂಟು ಹೋಟಲ್ಲುಗಳು ಓಪನ್ನಾಗಿ ಎಂಟೂನೂ ಮುಚ್ಚಿಕೊಂಡು ಹೋಗಿವೆ. ಮೇನ್ ರಸ್ತೆಗೆ ಆರು ಮೈಲಿ ದೂರ, ಗಂಡ ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗೋರು, ಫ್ಲೋಟಿಂಗ್ ಪಾಪುಲೇಷನ್ನೂ ಇಲ್ಲ - ಇಂತಹ ಕಡೆ ಅದ್ಯಾವ ಹೋಟಲ್ಲಿನವರು ಉದ್ಧಾರ ಆಗ್ತಾರೆ ಹೇಳಿ. ಅದಕ್ಕೇ ಈಗ ಇದ್ಯಾವುದು ಹೊಸಾ ಬಕರಾ ಹೋಟಲ್ಲು ತೆಗೆದಿರೋದು? ಪಾಪ ಅನ್ನಿಸಿತು. 'ನಮ್ಮ ಜತೆ ತುಂಬಾ ಹಿಂದೆ ಕೆಲಸ ಮಾಡ್ತಿರಲಿಲ್ಲವೇನೋ? ಆಚಾರಿ ಅಂತ? ಅಡಿಗೆ ಹೇಗೆ ಮಾಡಬೇಕು ಅಂತ ಊಟ ಮಾಡಬೇಕಾದರೆಲ್ಲಾ ಒಂದೊಂದು ಗಂಟೆ ಎಕ್ಸ್‌ಪ್ಲೈನ್ ಮಾಡ್ತಿದ್ದನಲ್ಲಾ ಅವನೇ ಇದನ್ನ ತೆಗೆದಿರೋದು...' ಅಂದ ಗೆಳೆಯ. ಆಗ ಆ ಆಚಾರಿ ನೆನಪಿಗೆ ಬಂದ. ಊಟಕ್ಕೆ ಕೂತ ಅಂದರೆ ಸಾಕು ತನ್ನ ಪಾಕ ಪ್ರವೀಣ ಕತೇನ ಈತ ನಮಗೆಲ್ಲಾ ಹೇಳಿ ಬಾಯಲ್ಲಿ ನೀರೂರಿಸುತ್ತಿದ್ದ. ನಾಲ್ಕು ವರ್ಷದ ಹಿಂದೆ ವೀ ಆರ್ ತಗೊಂಡು ಹಳ್ಳಿ ಸೇರಿದ್ದ. ಈಗ ಮತ್ತೆ ಪಟ್ಟಣ ಸೇರಿದಾನೆ ಅಂದರೆ ಅದೇನೋ ಗಾದೆ ನೆನಪಿಗೆ ಬಂತು.

ರಾಜು ಜತೆ ಕೊನೇ ಸ್ಟಾಪಿಗೆ ಹೆಜ್ಜೆ ಹಾಕಿದೆ. ಕೊನೇಸ್ಟಾಪಿನ ಬಲತುದೀಲಿ ಒಂದು ಚಿಕ್ಕ ಗ್ಯಾರೇಜಿನ ಎದುರು 'ಆಚಾರ್ ದರ್ಶಿನಿ' ಅಂತ ಬೋರ್ಡು ಹಾಕಿದ್ದ ಹೋಟಲು ಕಾಣಿಸಿತು. ಆದರೆ 'ದರ್ಶಿನಿ' ಸಂಪ್ರದಾಯ ಇರಲಿಲ್ಲ. ಅಂದರೆ ನಿಂತು ತಿನ್ನುವ ಟೇಬಲ್ಲು (ನಿಂತು ತಿನ್ನುವ ಟೇಬಲ್ಲು ಅಂದರೇನು ಅಂತ ನಿಮಗೆ ಗೊತ್ತಿದೆ - ಅದರಿಂದ ಅದನ್ನ ಇಲ್ಲಿ ಖಂಡಿತ ವಿವರಿಸೋಲ್ಲ). ದೋಸೆ ಇಡ್ಲಿ ಚಿತ್ರಾನ್ನ ಮೊಸರನ್ನ ಉದ್ದಿನ ವಡೆಯ ಬಣ್ಣ ಬಣ್ಣದ ಚಿತ್ರದ ಅಡಿಯಲ್ಲಿನ ಕೌಂಟರುಗಳು ಇರಲಿಲ್ಲ. ಬದಲಿಗೆ ಸಂಪೂರ್ಣ ಮೆಫ್ಯೂಸಿಲ್ ವಾತಾವರಣ ಇತ್ತು. ಒಳಗಡೆ ಬಲಬದೀಲಿ ಮೂರು ಟೇಬಲ್ಲು ಅದರ ಅತ್ತ ಇತ್ತ ತಲಾ ಎರಡು ಖುರ್ಚಿ ಎಡಬದಿಯಲ್ಲಿ ಎರಡು ಟೇಬಲ್ಲು ಮತ್ತು ಅತ್ತ ಇತ್ತ... ಎಡಬದೀಲಿ ಹೊಕ್ಕುತ್ತಿದ್ದ ಹಾಗೇ ಕಟ್ಟೆಮೇಲೆ ಗಲ್ಲಾ ಪೆಟ್ಟಿಗೆ (ಗಲ್ಲಾ ಪೆಟ್ಟಿಗೆ ಅಂದರೂ ನಿಮಗೆ

ಗೊತ್ತು ಅದನ್ನೂ ವಿವರಿಸೋಲ್ಲ) ಅದರ ಹಿಂದೆ ನಮ್ಮ ಆಚಾರಿ ಬಾಯಲ್ಲೊಂದು ಸಿಗರೇಟು.

'ನಮಸ್ಕಾರ ಬನ್ನಿ ಬನ್ನಿ...' ಅಂದ.

'ಕಾಸು ತಗೊಳ್ಳೋ ಹಾಗಿದ್ರೆ ಮಾತ್ರ ನಿಮ್ಮಲ್ಲಿ ವ್ಯಾಪಾರ...' ಅಂದೆ. ಪಾಪ ಹಳ್ಳಿಯಿಂದ ಸಿಟಿ ಸೇರಿರೋನು. ಮುಲಾಜಿಗೆ ಸಿಕ್ಕಬಾರದು ನೋಡಿ.

'ಅಯ್ಯೋ ಬನ್ನಿ ಸಾರ್, ಕಾಸು ಕೊಡೀವ್ರಂತೆ. ಅದಕ್ಕೇನು?...' ಅಂದ.

ಒಳಹೊಕ್ಕು ಮೂರನೇ ಟೇಬಲ್ಲು ಆರಿಸಿ ಕೂತೆವು ಅಡಿಗೆ ಮನೆ ಹತ್ತಿರದ ಟೇಬಲ್ಲು. ನನ್ನ ಬೆನ್ನು ಅಡಿಗೆ ಮನೆ ಕಡೇಗೆ.

ಎರಡು ಬಿಸಿಬಿಸಿ ಸ್ಟ್ರಾಂಗ್ ಕಾಫಿ ಆಚಾರ್ರೇ.... ಅಂದೆವು.

ತಿಂಡಿ ಏನೂ ಬೇಡವೇ?....

'ಬೇಡಿ ಈಗ ತಾನೇ ಆಯಿತು. ನಿಮ್ಮ ಅಂಗಡಿ ನೋಡಿದೆವು ಅಂತ ಕಾಫಿಗೆ ಬಂದೆವು...' ಅಂದ ರಾಜು.

'ಎರಡು ಕಾಫೀ ಎರಡು ಮಸಾಲೆ ಎರಡು ವಡೇ.....' ಅಂತ ಆಚಾರಿ ನಿಂತಲ್ಲಿಂದ ಕೂಗಿದ ಒಳಗಿನವರಿಗೆ ಕೇಳಿಸುವ ಹಾಗೆ. ಹೋಟಲಲ್ಲಿ ಇದ್ದವರು ನಾವು ಇಬ್ಬರೇ ಆಚಾರೀನ ಬಿಟ್ಟರೆ. ಮತ್ತೆ ಮಸಾಲೆ, ವಡೆ ಯಾರಿಗೆ? 'ಆಚಾರ್ ಪ್ಲೀಸ್ ಖಂಡಿತ ತಿಂಡಿ ಬೇಡಿ...' ಅಂದೆವು. 'ಆಯ್ತುಸಾರ್...' ಅಂತ ಒಳಹೊಕ್ಕ. ಬಲವಂತ ಮಾಡಿ ತಿಂಡಿ ತಿನ್ನಿಸಿದರೆ ತಿನ್ನಿಸಲಿ ಕಾಸು ಕೊಡೋದು ಬೇಡ ಅಂತ ಲೆಕ್ಕ ಹಾಕಿದೆವು.

ಒಳಗಡೆ ದೋಸೆ ಹೊಯ್ದು ಚುಂಯ್ ಚುಂಯ್ ಶಬ್ದ ಕೇಳಿಸಿತು. ಬಿಸಿ ಬಿಸಿ ಕಾಫೀನ ಕಪ್ಪು ಸಾಸರ್‌ನಲ್ಲಿ ತಂದು ನಮ್ಮೆದುರು ಇರಿಸಿದ. ತಿಂಡಿ? ಕಾದೆವು. ಒಳಗಡೆ ಹೋಗಿ ಎರಡು ಬೇರೆ ಬೇರೆ ತಟ್ಟೇಲಿ ವಡೆ ತಂದ. ಎಡಗಡೆ ಟೇಬಲ್ಲಿನ ಮೇಲೆ ಇಟ್ಟು. ಎಡಗಡೆ ಟೇಬಲ್ಲಿನಲ್ಲಿ ಕೂತು ಒಂದು ವಡೆ ತಿಂದ. ಎದುರು ಕುರ್ಚೀಲು ಕೂತು ಮತ್ತೊಂದು ಮುಗಿಸಿದ. ಕೈ ತೊಳೆದು ಒಳಹೊಕ್ಕ' ಲೇ ಕ್ಲೀನ್ ಮಾಡ್ರೋ...' ಅಂದ. ಅವನೇ ಆಚೆ ಬಂದು ವಡೆ ತಿಂದ ತಟ್ಟೆ ತಗೊಂಡು ಒಳಗೆ ಹೋದ. ಅದೇ ತಾನೇ ಕಾಫಿ ಮುಗಿಸಿದ್ದೆವು. ಹಾಗೇ ಮಾತು ಆಡುತ್ತಾ ಅಲ್ಲೇ ಕುಳಿತೆವು. ಬೇಡವೆಂದರೂ ಅವನ ಚಲನವಲನ ಕಣ್ಣಿಗೆ ಬಡಿಯುತ್ತಿತ್ತು.

ಒಳಗಿನಿಂದ ಎರಡು ತಟ್ಟೇಲಿ ದೋಸೆ, ಚಟ್ನಿ ತಂದ. ಎಡಗಡೆ ಟೇಬಲ್ಲಿನಲ್ಲಿ ಇರಿಸಿಕೊಂಡು ಅದನ್ನೂ ತಿಂದ - ಮೊದಲು ತಿಂದ ಹಾಗೇನೇ! ನಮ್ಮ ಮಾತು

ಮುಗಿಸಿದ್ವೆವು, ಎದ್ದೆವು. 'ಲೇ ಕ್ಲೀನ್ ಮಾಡ್ರೋ...' ಅಂತ ಕೂಗಿದ. ನಮ್ಮ ಕಾಫಿಲೋಟ, ಅವನು ತಿಂದ ತಿಂಡಿ ತಟ್ಟೆ ತಗೊಂಡು ಒಳಗೆ ಹೋದ. ಒಳಗಿನಿಂದ ಆಚೆ ಬರ್ತಾ 'ಎರಡು ಕಾಫಿ ಎಂಟ್ರೂಪಾಯಿ ಎರಡು ಸೇಲ್' ಅಂದ. 'ಒಂದು ಸೇಲ್ ಎರಡು ವಡೆ ಎರಡು ಮಸಾಲೆ ಇಪ್ಪತ್ನಾಲ್ಕುರೂಪಾಯ್' ಅಂದ. ಎರಡು ಬಿಲ್ ಬರೆದ. ಕಾಫಿ ಬಿಲ್ ನಮಗೆ ನೀಡಿದ. ಇನ್ನೊಂದು ಬಿಲ್ ಅವರನು ಮಡಿಕ್ಕೊಂಡ. ಕಾಫಿ ದುಡ್ಡು ತೆತ್ತು 'ಹೇಗಿದೆ ಬಿಸಿನೆಸ್ಸು?' ಅಂದೆವು. ಚೆನ್ನಾಗಿ ನಡೀತಿದೆ. 'ಸೆಲ್ಫ್ ಸರ್ವೀಸ್ ನೋಡಿ...' ಅಂತ ನಕ್ಕ. ಸೆಲ್ಫ್ ಸರ್ವೀಸ್ ಅಂದರೇನು ಅಂತ ಅರ್ಥ ಆಗಿತ್ತು. ಪಾಪ ಮುಂದಿನ ವಾರ ಇವನೂ ಅಂಗಡಿ ಎತ್ಕೊಂಡು ಹೋಗ್ತಾನೆ. ಈ ಸಲವೂ ಕೆಟ್ಟರೆ ಮುಂದೆಲ್ಲಿ ಹೋಗ್ತಾನೆ ಅಂತ ನಮ್ಮ ಯೋಚನೆ! ಬಿನ್ ಲ್ಯಾಡನ್ ತರಹ ಇವನೂ ಹೈಡ್ ಔಟ್ (ಅಥವಾ ಹೈಡ್‌ಸ್) ಹುಡುಕ್ಕೋಬೇಕಾದೀತೇನೋ ಸಾಲಗಾರರಿಂದ ತಪ್ಪಿಸ್ಕೊಳ್ಳೋಕೆ ಅಂತ ನಮಗೆ ಚಿಂತೆ!



ದಿನಾ ಹೀಗೆ ಮಗೂನ ನೋಡ್ಕೊಳ್ಳೋಕ್ಕಾಗುಲ್ಲ
ಅಂತ ಧೈರ್ಯವಾಗಿ ಹೇಳ್ರೀ ನಿಮ್ಸೊಸೇಗೇ...

ವೈ.ಎನ್. ಗುಂಡೂರಾವ್ ಅವರ

"ಅಡ್ಜಸ್ಟ್ ಮಾಡ್ಕೋಬೇಕ್ರೀ...."

(ವಿಜಯ ಪ್ರಕಾಶನ, 13ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು - 85)

ಶ್ರೀ ವೈ.ಎನ್. ಗುಂಡೂರಾವ್ ಅವರು ಕನ್ನಡ ಸಾಹಿತ್ಯಲೋಕಕ್ಕೆ ಹಾಸ್ಯ ಬರೆಹಗಾರರಾಗಿ, ಸಣ್ಣ ಕತೆಗಾರರಾಗಿ ಮತ್ತು ಪ್ರಬಂಧ ರಚನಕಾರರಾಗಿ ಪರಿಚಿತರು. 'ಹಾಸ್ಯಬ್ರಹ್ಮ' ಸಂಘಟನೆಯ ಸಂಸ್ಥಾಪಕರಲ್ಲಿ ಒಬ್ಬರು. ಅವರ ಈಚಿನ ಸಂಕಲನ 'ಅಡ್ಜಸ್ಟ್ ಮಾಡ್ಕೋಬೇಕ್ರೀ...' ಮೂರನೆಯ ನಗೆ ಬರಹಗಳ ಸಂಕಲನ - ಪ್ರಸ್ತುತ ಸಂಕಲನದಲ್ಲಿ ಇಪ್ಪತ್ಮೂರು ಲೇಖನಗಳಿವೆ.

ನಿರಾಯಾಸವಾಗಿ ಓದಿಸಿಕೊಂಡು ಹೋಗುವ ಗುಣ ಇಲ್ಲಿನ ಬರಹಗಳ ವೈಶಿಷ್ಟ್ಯತೆ. ಶ್ರೀ ಎಂ.ಪಿ. ಮನೋಹರ ಚಂದ್ರನ್‌ರವರ ಮುನ್ನುಡಿಯೊಂದಿಗೆ ಬಂದಿರುವ ಈ ಸಂಕಲನದಲ್ಲಿ ಎದ್ದು ತೋರುವುದು ಸುಸಂಸ್ಕೃತ ಹಾಸ್ಯದ ನೋಟ. ಹಾಸ್ಯ ಸಾಹಿತ್ಯವನ್ನು ಕಮರ್ಷಿಯಲ್ ಸಮಾವೇಶಕ್ಕೆ ಹೋಲಿಸಿರುವ ಶ್ರೀ ಎಂ.ಪಿ. ಅವರು ಈ ಬಗೆಯ ಸಾಹಿತ್ಯ ಎಲ್ಲ ಮೂಲೆಗಳನ್ನೂ ತಲುಪುವ ಚೈತನ್ಯ ಹೊಂದಿದೆ ಎನ್ನುತ್ತಾರೆ. ಸಂಕಲನ ಓದಿ ಮುಗಿಸಿದ ನಂತರ ಶ್ರೀ ಎಂ.ಪಿ. ಅವರೊಂದಿಗೆ ನಾವೂ ಸಹ ಮತ ಹೊಂದುತ್ತೇವೆ.

ಹಾಸ್ಯ ಸಾಹಿತ್ಯಕ್ಕೂ ಲಲಿತ ಪ್ರಬಂಧಗಳಿಗೂ ಗೆರೆ ಕಾಣಿಸದ ತೆಳುವಾದ ಬೇರ್ಪಡೆ ಸಂಧಿ ಇದೆ ಎನ್ನುತ್ತಾರೆ. ಇಲ್ಲಿನ ಸಂಕಲನದಲ್ಲಿನ ಬರಹಗಳಲ್ಲಿ ಲಲಿತ ಪ್ರಬಂಧಗಳೂ ಹಾಸ್ಯ ಬರಹಗಳ ಸಂಗಡ ಸೇರಿ ಒಂದು ರೀತಿಯ ಸಮ್ಮಿಶ್ರ ಸುಖವನ್ನು ಓದುಗನಿಗೆ ನೀಡುವಲ್ಲಿ ಯಶಸ್ವಿಯಾಗಿವೆ.


'ಕಾಯಲಾರೆವೋ ಕೃಷ್ಣ', 'ಕರಯಾತ್ರೆಯ ಕರಕರೆ' 'ದಾಡಿಗೆ ಬಂದ ದಾಡಿ', 'ಹೆಬ್ಬೆಟ್ಟಿನ ಮಹಾತ್ಮೆ' ಮೊದಲಾದ ಲೇಖನಗಳು ಲಲಿತ ಪ್ರಬಂಧದ ಗುಂಪಿಗೆ ಸೇರಿಸಬಲ್ಲಂತಹವುಗಳು. 'ಒಂದು ಕೊಂಡರೆ ಮತ್ತೊಂದು' - ಮಿಡ್ಲ್ ಲೇಖನವಾದರೂ ತನ್ನ ರೆಲೆವೆನ್ಸ್‌ಯನ್ನು ಕಾಪಾಡಿಕೊಂಡಿದೆ. 'ಬೆಗ್...' ಲೇಖನ ಪ್ರತಿ ಸಾಹಿತಿಯೂ ಪಡೆಯುವ ಅನುಭವ! 'ಅಡ್ಜಸ್ಟ್ ಮಾಡ್ಕೋಬೇಕ್ರೀ' ಲೇಖನ ಸಂಕಲನ ಶೀರ್ಷಿಕೆಯ ಹೆಮ್ಮೆ ಹೊತ್ತದ್ದು. 'ಜೀವನದಲ್ಲಿ ಅಡ್ಜಸ್ಟ್ ಮಾಡಿಕೊಂಡು ಹೋಗುತ್ತಿದ್ದರೆ ಘರ್ಷಣೆಗಳಿಗೆ ಅವಕಾಶವೇ ಇಲ್ಲ' ಎಂಬುದು ಲೇಖಕರ ಅನುಭವ - ಸರ್ವಕಾಲದ ಸತ್ವವಾಗಿ ನಿಲ್ಲುತ್ತದೆ.

ಲೇಖನಗಳನ್ನು ಓದಿ ಮುಗಿಸಿದ ನಂತರ ಕೆಲವು ಬಾರಿ ತಲೆಯಲ್ಲಿ ಗುಂಯ್ ಗುಡುವಂತೆ ಕೆಲವು ಪ್ರಸಂಗಗಳು ತಲೆಯಲ್ಲಿ ಓಡಾಡುತ್ತವೆ. ಇದು ಹಾಸ್ಯ ಬರಹಗಳ ಗಟ್ಟಿತನಕ್ಕೆ ಒರೆಗಲ್ಲು. ಈ ಸಾಧನೆಯನ್ನೂ ಗುಂಡೂರಾವ್ ಅವರು ತಮ್ಮ ಸಂಕಲನದಲ್ಲಿ ಯಶಸ್ವಿಯಾಗಿಸಿದ್ದಾರೆ.

ಸಭ್ಯ, ಸುಸಂಸ್ಕೃತ ಮತ್ತು ಪಾಲಿಷ್ಡ್ ಬರಹಗಳು ಇಲ್ಲಿನ ಪ್ಲಸ್ ಪಾಯಿಂಟು. ಇದು ನಮ್ಮ ಹಾಸ್ಯ ಬರಹಗಾರರೆಲ್ಲರ ಗುರಿಯೂ ಸಹ!

ಮುನ್ನುಡಿಯಲ್ಲಿನ ಮತ್ತೊಂದು ಅಂಶ ಹೀಗಿದೆ: ಲೇಖಕರು ನೇರ ಮಾನವ ಕಪಟವಿರದ ವ್ಯಕ್ತಿತ್ವದವರು ಅವರ ಲೇಖನಗಳೂ ಹಾಗೇ ಇವೆ. ಇಲ್ಲಿನ ಲೇಖನಗಳಲ್ಲಿ ಇದೂ ಒಂದು ಎದ್ದು ತೋರುವ ಅಂಶ. ಹಾಸ್ಯ ಲೇಖನಗಳಲ್ಲಿ ಬಹುತೇಕ ಲೇಖಕರು ಚುಚ್ಚುವ, ಕುಟುಕುವ ಮೊನಚು ಬರಹಗಳ ಮೊರೆ ಹೋದರೆ ಇಲ್ಲಿ ಅವು ಯಾವುವೂ ಇಲ್ಲ. ಕಡೇ ಪಕ್ಷ ರಾಜಕಾರಣಿಗಳ ಬಗೆಗೆ ಒಂದೇ ಒಂದು ತುಣುಕು ವ್ಯಂಗ್ಯ ನೋಟ ಸಹ ಇಲ್ಲ. ಇವೆಲ್ಲವೂ ಸಂಕಲನದ ಮೈನಸ್ ಪಾಯಿಂಟುಗಳಾಗದೇ ಪ್ಲಸ್ ಪಾಯಿಂಟುಗಳಾಗೇ ಉಳಿದು ಒಂದು ಮೆರಗು ನೀಡುವಲ್ಲಿ ಯಶಸ್ವಿಯಾಗಿದೆ. ಈ ದೃಷ್ಟಿಯಿಂದ ಸಂಕಲನದ ಓದು ಒಂದು ಲಾಭದಾಯಕ ಅನುಭವ ಆಗುವುದಲ್ಲದೇ ಇತರ ಹಾಸ್ಯ ಸಂಕಲನಗಳಿಂದ ಪ್ರತ್ಯೇಕವಾಗಿ ನಿಲ್ಲುತ್ತದೆ. ಗುಂಡೂರಾವ್, ವೆಲ್‌ಡವ್, ಕೀಪ್ ಇಟ್ ಅಪ್, ವಾಗ್ಮಿಯಾಗಿ, ಸಂಘಟಕರಾಗಿ, ಸಾಹಿತ್ಯ ಸಂಚಾರಕರಾಗಿ ಹಲವು ವೈಶಿಷ್ಟ್ಯಗಳನ್ನು ಹೊತ್ತ 'ಗುಂಡೂ' ಹಾಸ್ಯಪ್ರಾಕಾರದಲ್ಲೂ ಮಿಂಚಿದ್ದಾರೆ.

– **ಗೋಪಾಲಿ**



ಬೇಗ ಓಡ್ಸೋ... ಹಳೇ ಪಾಪಕರ್ಮಗಳು
ಅಟ್ಟಿಸಿಕೊಂಡು ಬರ್‍ತಾ ಇವೆ....

ಕೈಗೆಟುಕಲಿಲ್ಲ ಕಾಂಚಾಣ!

- ಎಸ್ಸಾರ್‍ಮೂರ್ತಿ

ಆಗಿರೋದಿಷ್ಟು:

ರಂಗಣ್ಣ (ಫಿಜಿಕ್ಸ್ ಪ್ರೊಫೆಸರ್, ತಾತಾ ಇನ್ಸ್ಟಿಟ್ಯೂಟ್), ಹೆಂಡತಿ ಸರಸೂ ಬಲವಂತಕ್ಕೆ ತನ್ನ ಹೈಸ್ಕೂಲು ಕ್ಲಾಸ್‌ಮೇಟ್ ಗುಂಡ (ಎಂಬ ತರಲೆಯ)ನ ಟೀವಿ ಧಾರಾವಾಹಿಯಲ್ಲಿ ಏಕಮಾತ್ರ ಸೀನಿನಲ್ಲಿ ಸ್ವರ್ಗವಾಸಿಯಾಗುವ ಪಾತ್ರಧಾರಿಯಾದ. ಅಲ್ಲಿ ಆಕಸ್ಮಿಕವಾಗಿ ಪರಿಚಯಸ್ಥರಾದ ಸಜ್ಜನರು ಅವನನ್ನು ಬೇರೊಂದು ಪ್ರೊಡಕ್ಷನ್ನಿನ ಚಿತ್ರದಲ್ಲಿ ನಟಿಸುವಂತೆ ಅವನಿಗೆ ಇಚ್ಛೆಯಿಲ್ಲದಿದ್ದರೂ ಒಪ್ಪಿಸಿದರು. ಅವಿವೇಕಿ ಗುಂಡನ ಸಹವಾಸ ತನ್ನ ಮೇಲೆಳೆದ 'ಅನಿಷ್ಟ' - ಉದಾ: ಕೋರ್ಟಿಗೆ ಯಾತ್ರೆ - ಗಳಿಂದಾದ ಧನವ್ಯಯದ ಬಗ್ಗೆ ರಂಗಣ್ಣ ಕೆಟ್ಟಕನಸು ಎಂಬ ಧೋರಣೆ ತಳೆದ.

ಮುಂದಕ್ಕೋದ್ಕಳಿ....

ರಂಗಣ್ಣ ಸ್ವಭಾವತಃ 'ಕಂಜೂಸ್' ಅಲ್ಲ, ಅತಿ ಧಾರಾಳಿ ಎನ್ನಲೂ ಆಗದು. ಆದರೆ ಅವನ ಶಿಸ್ತಿನ ಮೆದುಳು ಮಾತ್ರ ಗುಂಡನ ಸಹವಾಸದ 'ಬ್ಯಾಲೆನ್ಸ್ ಷೀಟ್' ಮಂಡಿಸಿಕೊಂಡಿತು:

	ಆದಾಯ ರೂ.ಪೈ.	ವ್ಯಯ ರೂ.ಪೈ.	ತಪಶೀಲು
1. ಟೀವಿ ಶೂಟಿಂಗ್ ಬಾಬ್ತು			
ಅ) ರಂಗಣ್ಣ	?		ಸಲ್ಲಬೇಕಾದ ರುಸುಮು ಕೈಸೇರುವ ವರೆಗೆ 'ಸಸ್ಪೆನ್ಸ್'ನಲ್ಲಿ ಇಡಲಾಗಿದೆ.
ಆ) ಸರಸು	?	-	
2. ಪೂರ್ವಭಾವಿ (ಆಳ ತಿಳಿಯದು) ಕೋಡಬಳೆ, ಹುರಿಗಾಳು, ಆಟೋ ಇತ್ಯಾದಿ	-	233.80	
3. ಬೇಲೂರು ಯಾತ್ರೆ, ಬಾಬ್ತು		101.17	ಬಸ್‌ಚಾರ್ಜ್ ಶಿವಾಜಿ

			ಕೊಟ್ಟಿರುತ್ತಾರೆ. ಜ್ಯೂಸ್, ಹಣ್ಣು ಇತ್ಯಾದಿ ಗೆಸ್ಟ್ ಚಾರ್ಜುಗಳು
4. ಸುನಂದಾ ಮಕ್ಕಳಿಗೆ ಬೊಂಬೆಗಳು		36.58	
5. ಬೆಂಗಳೂರಿಗೆ ಹಿಂದಿರುಗಿದ ಖರ್ಚು		98.64	ಆಟೋ ಚಾಲಕ ಚಿಲ್ಲರೆ ಮನುಷ್ಯನಾಗಿ ಇರದಿದ್ದರಿಂದ ತೆತ್ತ ರೂ. 4.20 ಸೇರಿದೆ.
6. ಕೋರ್ಟು			
ಅ) ಗುಂಡನಿಗಿತ್ತ 'ದಾನ'		700.00	
ಆ) ಭೋಜನ, ಆಟೋ ಇತ್ಯಾದಿ		86.74	
ಇ) ಪೋಲೀಸ್ ಸಾಹೇಬರಿಗೆ ಕಾಣಿಕೆ		200.00	(ಮನೆಯಲ್ಲಿಯೇ ಕೊಡಲಾಗಿದೆ)
ಈ) ಮಠದ ಸೇವೆ, ದಕ್ಷಿಣೆ ಇತ್ಯಾದಿ		3068.00	
7. ನಿವ್ವಳ ಉಳಿತಾಯ	?	?	
ಒಟ್ಟು ಮೊತ್ತ	3X?	4,524.13+?	

ಟಿಪ್ಪಣಿಗಳು:

1. ನಗದು ವ್ಯವಹಾರ ಮಟ್ಟಿಗೆ ಸೇರಿಸಲಾಗಿದ್ದು, ಮನೆಯಲ್ಲಿ ಅತಿಥಿ ಸತ್ಕಾರ, ಸಂಪಾದಿಸಿದ ಗುಡ್‌ವಿಲ್, ಅನುಭವ, ಮಾನಸಿಕ ವ್ಯಥೆ/ಹರ್ಷ ಇತ್ಯಾದಿಗಳನ್ನು ನಮೂದಿಸಿಲ್ಲ.
2. ಆದಾಯ-ವ್ಯಯದ ಪ್ರಶ್ನ ಸೂಚಕಗಳನ್ನು ಸಮನೆಂದು ಭಾವಿಸಿ ಹೊಡೆದುಹಾಕಲಾಗದು.

3. ಅ-ಈ ಕಾಲಮ್ಮಿನ ಮೊತ್ತದಲ್ಲಿ ರೂ. 3000 ದೇವರಿಗೆ ಕೊಟ್ಟದ್ದು 'ಟಿ.ಡಿ.ಎಸ್.'ಗೆ (Tax Deductible at Source) ಒಳಪಡದು. ರಸೀತಿಯನ್ನು ಪ್ರಸಾದ ವಿನಿಯೋಗ ಸಮಯದಲ್ಲಿ 'ಹರಿ(ದು) ಸಮರ್ಪಣೆ' ಮಾಡಲಾಗಿದೆ.

4. ಕಾಲಂ 1 (ಅ,ಆ) ಆದಾಯಕ್ಕೆ ರಸೀತಿ ನೀಡಲಾಗಿದೆ.

ಇಂತಹ 'ವ್ಯಯಹಾರ'ದ ಲೆಕ್ಕಪತ್ರಗಳನ್ನು ಯಾವ ಆಡಿಟರ್/ಕಂಪೆನಿಯವರು ಪರಿಶೋಧಿಸಿಕೊಡಬಹುದು ಎಂದು ಮನಸ್ಸಿನಲ್ಲೇ ರಂಗಣ್ಣ ನಗುತ್ತಿರುವಾಗ ದರ್‍ಯಾನಾನಿಯವರ ಕಾರು ಮನೆಯ ಮುಂದೆ ಬಂದು ನಿಂತಿತು. ಜೊತೆಗೆ ಬಂದ ಶೇಖರ, ದಂಪತಿಗಳನ್ನು 'ಈ ದಿನದ ಮುಹೂರ್ತ ಪೂಜೆ' ಎಂದು ನೆನಪಿಸಿ, ಕರೆದೊಯ್ದ. 'ಸಾಹೇಬರು' ಅವರನ್ನು ಆತ್ಮೀಯತೆಯಿಂದ ಸ್ವಾಗತಿಸಿ 'ನೀವು ತುಂಬಾ ಓದಿದವರು ಎಂದು ತಿಳಿದು ಅತ್ಯಂತ ಹರ್ಷವಾಯಿತು' ಎಂದರು. ಶೇಖರ 'ಹೌದು ಸಾರ್, ಗುಂಡೇಶೋರ ಕ್ಲಾಸ್‌ಮೇಟ್ ಆಗಿದ್ದೋರು' ಎಂದುಬಿಟ್ಟು ಎಲ್ಲರನ್ನೂ ನಗೆಗಡಲಿಗೆ ತಳ್ಳಿದ.

ಶಿವಾಜಿರಾವ್ 'ರಾಯರೇ, ಆ ನಿಮ್ಮ ಕ್ಲಾಸ್‌ಮೇಟು ಸಾಹೇಬರ ಹತ್ತಿರಾನು ಕಾಸು ಕೀಳೋದರಲ್ಲಿದ್ದ. ನೀವು ಆ ಕತೆ ಕೇಳಬೇಕು' ಎಂದದ್ದಕ್ಕೆ ಯಜಮಾನರು 'ಈಗ ಪೂಜೆ ಮುಗಿಯಲಿ, ಆಮೇಲೆ ಟೀ ಕುಡಿತಾ ಹೇಳೋಣ' ಎಂದು ಸಮಯ ಪ್ರಜ್ಞೆ ತೋರಿದರು.

ಮುಹೂರ್ತ ಸರಳವಾಗಿ ನಡೆಯಿತು. 'ಜಯಮಾತಾ' ಪ್ರೊಡಕ್ಷನ್ಸ್‌ರವರ ಸಪ್ರೇಮ ಕಾಣಿಕೆ 'ಅಬಲೆಯರು' ಚಿತ್ರದ ಸೀನ್ ಒನ್, ಟೇಕ್ ಒನ್ ಕ್ಲಾಪ್ ಬೋರ್ಡ್ ಕ್ಲಿಕ್ಕಿಸಿದರು, ಸಾಹೇಬರು. ಎಲ್ಲ ತಾಂತ್ರಿಕ ಏರ್ಪಾಡುಗಳ ನಿಯಂತ್ರಣವನ್ನು ಪಟ್ಟೇ ರಾಮಚಂದ್ರರವರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಮುಹೂರ್ತದ ಷಾಟ್ ಜೊತೆಗೆ ಮಂಜುಳವಾಣಿ, ರಂಗಣ್ಣ ಇರುವ ದೃಶ್ಯವೊಂದನ್ನು ಚಿತ್ರಿಸಿಕೊಂಡರು. ಸುಮಾರು ಎರಡು ಘಂಟೆಗಳ ನಂತರ 'ಪ್ಯಾಕಪ್' ಆಯಿತು. ಲಘು ಉಪಾಹಾರ ಸ್ವೀಕರಿಸುತ್ತ ಕುಳಿತಾಗ ಗುಂಡೇಶ - ದರ್‍ಯಾನಾನಿಯವರ ನಡುವಣ 'ಯವಾರ'ದ ಕಥೆ ರಂಗಣ್ಣನಿಗೆ ತಿಳಿದು ಬಂತು:

ಕೆಲವು ತಿಂಗಳ ಕೆಳಗೆ ದರ್‍ಯಾನಾನಿ ಹಣವಂತರು, ಬಿಜಿನೆಸ್ ಅಡ್ವಾನ್ಸ್ ಮಾಡುತ್ತಾರೆ - ಎನ್ನುವ ವಿಷಯವನ್ನು, ಇರುವೆ-ಬೆಲ್ಲ-ನ್ಯಾಯದಂತೆ, ಕಂಡ ಗುಂಡ. ತನ್ನ ಗಾಡಿ ಓಡಿಸಲು ಜಿಗುಟು ಮಕ್ಬಲ್‌ಮಲ್ಲನ ಜೊತೆಗೆ ಜೋಡೆತ್ತೊಂದು ಸಿಕ್ಕಿದರೆ ಸುಗಮವಾಗುವುದೆಂದು ಬಗೆದು 'ಸಾಪ್ಕಾರ'ರ

ಬಿಳಿಗ್ರೆವ. ಮೊದಲು ಅವರ ಸರಳತೆಯನ್ನು ನೋಡಿ 'ಹುಲಿ ಹೊಡೆಯಲು ಬಂದರೆ ಈ ಇಲಿ ಸಿಕ್ಕಿತಲ್ಲಾ!' ಎಂದು ಅನುಮಾನಿಸಿದರೂ ಬೋನಿಗೆ ತಳ್ಳಿಕೊಂಡು ನೋಡೋಣವೆಂದು ನಿರೀಕ್ಷಿಸಿದ. ಅವರಿಗೆ 'ತಾನೊಬ್ಬ ಖ್ಯಾತ ಟೀವಿ ಸೀರಲ್ ನಿರ್ದೇಸಕ, ತನ್ನ ಧಾರವಾಯಿಗಳು ಮಸ್ತಾಗಿ ಪ್ರಸಸ್ತಿ ಪಡೆದವೆ' ಎಂದು ಆತ್ಮಪರಿಚಯ ಮಾಡಿಕೊಂಡು ವಿಜಿಟಿಂಗೂ ನೀಡಿದ. ಸದಸ್ಯದಲ್ಲೇ ಒಂದು 'ಇಟ್ ಪಿಲಂ' ಮಾಡಲಿರುವುದಾಗಿಯೂ, ಸಾವ್ಕಾರ್ರು ಮನುಸ್ಸ ಮಾಡಿ ಇಪ್ಪತ್ತೋ ಮುವ್ವತ್ತೋ (ಲಕ್ಸ) ಕೊಟ್ಟರೆ ಆರು ತಿಂಗಳಲ್ಲಿ ಬಡ್ಡಿ ಸಮೇತ ರಿಟರ್ನ್ ಕೊಡುವುದಾಗಿ ತಿಳಿಸಿದ.

ದರ್ಯಾನಾನಿ ವಿವರಿಸಿದರು: 'ನೋಡಿ, ಮಿ. ಗುಂಡೇಶ್... ಈ ಹಣ ನಾನು ಇನ್‌ವೆಸ್ಟ್ ಮಾಡುತ್ತಿಲ್ಲ. ಆಫ್ರಿಕಾ ಖಂಡದಲ್ಲಿರುವ ಗ್ಯಾಂಬಿಯಾ ಎಂಬ ಸಣ್ಣ ರಾಷ್ಟ್ರದ ಮುಖ್ಯಪಟ್ಟಣ ಬಾಂಜುಲ್ ಎಂಬ ಊರಿನಲ್ಲಿ ನನ್ನ ಭಾವಮೈದ ದೊಡ್ಡ ಉದ್ಯಮಿ. ಆತ ಸೂಕ್ತವಾದ ಪ್ರಾಜೆಕ್ಟ್‌ಗಳಿಗೆ ಹಣ ತೊಡಗಿಸಲು ಇಚ್ಛಿಸುತ್ತಾನೆ:

ಗುಂಡನಿಗೆ ದೇವರು - ಪೂಜಾರಿಯ ಹೋಲಿಕೆ ತೋರಿ, ಮಾನವನನ್ನು ಹೇಗಾದರೂ ಒಲಿಸಿಕೊಳ್ಳಬಹುದೆನಿಸಿತು.

'ಇದಲ್ಲದೇ ನಮ್ದೂ ಬ್ಯಾರೆ ಬಾರಿ ಬಾರಿ ಪ್ರಾಜೆಕ್ಟೇ ಅವೆ ಸಾರ್, ಯಾವುದಕ್ಕೆ ಬೇಕಾದರೂ ಪೈನಾಲ್ಸ್ ಕೆಲ್ಸಕ್ಕೆ ಬತ್ತದೆ..... ನೀವು ಏನೂ ತಿಳ್ಕಾಬೇಡಿ ಸಾರ್, ನಿಮ್ಮ ಪರ್‌ಸೆಂಟೇಜ್ ಮುರ್ಕೊಂಡು ಕೊಟ್ರೂ ಸಮ' ಎಂದ ಗುಂಡ.

ದರ್ಯಾನಾನಿ ನಕ್ಕು ವಿಚಾರಿಸಿದರು: 'ಈಗ ನಿಮ್ಮ ಒಂದು ಮುಖ್ಯ ಉದ್ಯೋಗದ ಬಗ್ಗೆ ಮಾತನಾಡೋಣ. ನೀವು ತೆಗೆಯುವ ಫಿಲಮ್ಮಿನ ಕಥೆ, ಚಿತ್ರಕಥೆ ಮತ್ತಿತರ ಸಿದ್ಧತೆಗಳು ಯಾವ ಹಂತದಲ್ಲಿವೆ? ನಿರ್ದೇಶಕರು, ಎಡಿಟರ್, ಕ್ಯಾಮರಾಮನ್ ಯಾರು?'

ಗುಂಡ: 'ಅಂಗೆಲ್ಲ ಒಂದೇಕಿತ ಬರ್ಸಾಕಿಲ್ಲ. ನಾಳೆ ಸೂಟಿಂಗಿಗೆ ಇವತ್ತೋ ಅಥವಾ ಅವತ್ತೇಯ, ಟ್ರೆಂಡ್ ನೋಡ್ಕೊಂಡು ಲೇಟೆಸ್ಟ್ ಷ್ಟೋರಿ ಬರ್ಕಾತೀವಿ. ಇಲ್ಲಾಂದ್ರೆ ಕತೆ ಓಲ್ಡ್‌ಫ್ಯಾಸನ್ ಆಗ್ಬಿಡ್ತದೆ.... ಆಮೇಲೆ ಸಿಕ್ಕೋ ಪೈನಾನ್ಸ್ ಮೇಲೆ ಆರ್ಟಿಷ್ಟು, ಕ್ಯಾಮ್ರ, ಡೇರೆಕ್ಟ್ರು ಸೆಟ್ ಮಾಡ್ತೀವಿ.'

ದರ್ಯಾನಾನಿ: ಕಾಸಿಗೆ ತಕ್ಕ ಕಜ್ಜಾಯ ಅನ್ನಿ.

ಗುಂಡ: ವಷ್ಟೇಯ... ನೀವೇನಾರಾ ಸರ್ಯಾಗಿ ಪೈನಾನ್ಸ್‌ಕೊಟ್ರೆ ಸಾರುಕ್ಕಾನೋ, ರುತಿಕ್ ರೋಸಾನೋ ಅಂತೋರ್ನೇ ಆಕ್ಕತೀವಿ.

ದರ್ಯಾಸಾನಿ : ಷಾ ರುಖ್ ಖಾನ್, ಹೃತಿಕ್ ರೋಷನ್ ಅಂಥೋರು ನಟಿಸೋ ಬ್ಲಾಕ್ ಬಸ್ಟರ್‌ಗಳಿಗೆ ನಮ್ಮ ಗ್ರೂಪ್‌ನವರು ಫೈನಾನ್ಸ್ ಮಾಡಲು ಇಚ್ಛಿಸುವುದಿಲ್ಲ. ಏಕೆಂದರೆ ಒಂದೊಂದೂ ಪ್ರೊಡಕ್ಷನ್ ವರ್ಷಗಟ್ಟಲೆ ಎಳೆಯುತ್ತವೆ. ಫೈನಾನ್ಸ್ ಮೇಲೂ ಕಂಟ್ರೋಲ್ ಇರುವುದಿಲ್ಲ. ಹೋಗಲಿ ಮಿ. ಗುಂಡೇಶ್ ನೀವು ಬೇರೆ ಯಾವ ಬಿಜಿನೆಸ್ ಮಾಡಬಲ್ಲಿರಿ?

ಗುಂಡ : ನೀವೇ ಯಾವ್ದನ್ನಾ ಏಳಿಸಾರ್, ಅದೇ ಮಾಡಾನ.

ದರ್ಯಾನಾನಿ : ಎಕ್ಸ್‌ಪೋರ್ಟ್ ಬಗ್ಗೆ ನಿಮ್ಮ ಅಭಿಪ್ರಾಯ?

ಗುಂಡ : ಅದೂ ಒಳ್ಳೇದೇಯ.... ಒಳ್ಳೆ ಪ್ರಾಪಿಟ್ ಇರ್ತದಂತೆ. ಆದ್ರೆ ರೂಲುಸ್ ಜಾಸ್ತಿ ಅಂತಾರೆ... ನಮ್ಗೆ ಅನುಬವ ಕಮ್ಮಿ... ನೋಡಿ ಸಾರ್, ಸೀದಾಮಾತು ಏಳ್ಬಿಡ್ಬೇಕು ಅಲ್ವಾ ಸಾರ್?

ದರ್ಯಾನಾನಿ : ಒಪ್ಪುವ ಮಾತೇ ಸರಿ. ಈಗ ನಾನು ಅದೇ ವ್ಯವಹಾರ ಮಾಡ್ತಿದೀನಿ. ಎಕ್ಸ್‌ಪೋರ್ಟ್ - ಇಂಪೋರ್ಟ್... ಆದರೆ ಗ್ಯಾಂಬಿಯಾ ದೇಶಕ್ಕೆ ಮಾತ್ರ ಏನೂ ಕಳಿಸೊಲ್ಲ. ಏಕೆಂದರೆ ಈ ವ್ಯವಹಾರದಿಂದ ನಮ್ಮ ನಮ್ಮ relationship ಕೆಡಬಾರದು. ಅಂತ.

ಗುಂಡ : ಓ... ಔದು ಸಾರ್... ಈ ರಿಲೇಟಿವ್ಸು ಟೋಪಿದಗಾ ಮಾಡಿದರೂ ಬಾಯಿ ಬಿಡೋವಂಗಿಲ್ಲ. ಯಾರ್ನೂ ನೆಂಬಾಕಾಗಾಕಿಲ್ಲ ಈ ಕಾಲ್ದಾಗೆ...

ದರ್ಯಾನಾನಿಯವರಿಗೆ ತಮ್ಮ ಮುಂದೆ ನಿಂತ ಅಭ್ಯರ್ಥಿಯ ಪೂರ್ಣ ಬಂಡವಾಳ ತಿಳಿದುಹೋಯಿತು. ಸೌಜನ್ಯಕ್ಕಾಗಿ ಒಂದೆರಡು ಪ್ರಶ್ನೆ ಕೇಳಿದರು. ಗುಂಡ ಅವಸರದಿಂದ ಉತ್ತರಿಸಿ, ಕೇಳಿದ:

'ಅಂಗಾರೆ ಆ ದೇಸಕ್ಕೆ ನಾನು ಎಸ್ಪೋರ್ಟ್ಸ್ ಮಾಡಬೋದಲ್ವಾ ಸಾರ್?'

'ಓಹೋ!... ಆದರೆ ಅಲ್ಲಿಗೆ ಏನು ಬೇಕೋ ಅದನ್ನು ಅಮೆರಿಕಾ, ಇಂಗ್ಲೆಂಡ್, ಚೀನಾದವರು ಕಳಿಸುತ್ತಾರಲ್ಲಾ!'

'ಅವರ್ಯಾರೂ ಸಪ್ಲೆ ಕೊಡದೇ ಇರೋವಂತ ಐಟಂ ಕಳಿಸಾದು!'

ಸಾವ್ಕಾರ್ರು ವಿವರ ಕೇಳಿದಾಗ ಗುಂಡ ತನ್ನ ತಲೆಯನ್ನು ರೇಸ್ ಕುದುರೆಯ ಮಾದರಿ ಓಡಿಸಿದ. ವಿನ್ನೋ, ಪ್ಲೇಸೋ - ಅಂತೂ ಕುದುರೆ ಏಂತಾಗ ಆರ್ಕಿಮಿಡೀಸನ ಯುರೇಕಾ ಹೊಡೆದ.

'ಆ... ಒಳ್ಳೇತು ಸಾರ್,... ಆ ದೇಸಕ್ಕೆ ಬೇರೆ ಯಾರು ಸಪ್ಲೆ ಕೊಡ್ತೇ ಇರೋ ಪದಾರ್ತ ಐತೆ. ಈಗ ನೋಡಿ, ನಮ್ಮ ಇಜ್ಞಾನ ಪರಿಸತ್ನೋರೋ ಯಾರೋ ಒಳ್ಳೆ ಕನ್ನಡ ಬಾಷೆ ಕಂಪ್ಯೂಟರ್ ಮಾಡವ್ರಂತೆ. ಅದನ್ನ ಕಳಿಸಿಬಿಡಾವಾ... ಅದು ಎಲ್ಲೂ ಸಿಕ್ಕಂಗಿಲ್ಲ ಅವರ್ಗೆ...' ಐಡಿಯಾ ಮಿಸ್ಸು ಎಂದುಕೊಂಡು ಫಾಲೋ ಅಪ್ ಮಾಡಿದ: 'ಔದು ಸಾರ್... ಬೊಂಬಾಟ್ ಆಗಿರ್ತದೆ' ಎಂದು ಬೆನ್ನು ತಟ್ಟಿಕೊಂಡ. ದರ್ಬ್ಯಾನಾನಿಯವರಿಗೆ ಯಾವ ರೀತಿ ನಗಬೇಕೆಂದು ತಿಳಿಯದಾಯಿತು, ಗ್ಯಾಂಬಿಯಾ ಎಂಬ ದೇಶಕ್ಕೆ ಕನ್ನಡದ ಕಂಪ್ಯೂಟರ್‌ಗಳು ಹೇಗೆ ಧಾಳಿ ಇಡಬಹುದು! ಎಂದುಕೊಂಡರೂ ನಗೆಯನ್ನು ಹತ್ತಿಕ್ಕಿ ಸಮಾಧಾನದಿಂದಲೇ ಹೇಳಿದರು:

'ಆದರೆ ಮಿ. ಗುಂಡೇಶ್, ಅಲ್ಲಿ ಕನ್ನಡದವರು ಯಾರೂ ಇಲ್ಲದ್ದರಿಂದ ಮಾರ್ಕೆಟ್ ಇರುವುದಿಲ್ಲ. ಬೇರೆ ಏನಾದರೂ....'

ಈ 'ಯಕ್ಷಪ್ರಸ್ನೆ' ಉತ್ತರಿಸುವಷ್ಟು ಸ್ಟಾಕ್ ಅವನಲ್ಲಿ ಇಲ್ಲದಾಯಿತು. ಆದರೆ ಪರ್ಯಾಯ ಹುಡುಕಲೇಬೇಕಲ್ಲ! ಏಕೆಂದರೆ ಅವನಿಗೆ ಅರ್ಜೆಂಟಾಗಿ (ಅಂದರೆ ಯಾವಾಗಲೂ, ಎನ್ನೋಣ) ಬೇಕಾಗುವ ಹಣದ ತಿಜೋರಿ ಈ ಮನುಷ್ಯನ ಬಳಿ ಇದೆ. ಆದರೆ ಅದರ ಬೀಗಕ್ಕೆ ಕೈ ಇಲ್ಲವೇ! ಹಾಗೂ ಹೀಗೂ ಯೋಚಿಸಿ, ಯೂರೇಕಾ - ದಿ ಸೆಕೆಂಡ್ ಹೊಳೆಸಿಕೊಂಡ:

'ಓಗ್ಲಿ ಅದು ಬುಡಿಸಾರ್... ಇನ್ನೊಂದು ಮಾಲು ಐತೆ... ಎಲ್ಲೂ ಸೇಲು ಫೇಲೇ ಆಗಂಗಿಲ್ಲ... ತೆಮುಳು ಸಿನಿಮಾ ಕ್ಯಾಸೆಟ್‌ಗಳ್ನ ಎಸ್ಪೋರ್ಟ್ಸ್ ಮಾಡಿಬಿಡಾನಾ.'

ದರ್ಬ್ಯಾನಾನಿ : 'ಆ ಚಿಕ್ಕ ದೇಶದಲ್ಲಿ ತಮಿಳುಹಾಡು ಕೇಳುವವರೂ ಇರಲಾರರು'


ಗುಂಡ : 'ಅಂಗಾರೆ ಬುಡಿಸಾರ್... ತೆಮಿಳ್ನೋರೂ, ಮಳಾಳಿಗಳೇ ಇಲ್ದೇ ಇರೋವಂತ ಅದೆಂತ ದೇಸ! ನಮ್ಮ ಇಂಡ್ಯಾ ಬಾರತಾನೇ ವಾಸಿ, ಎಲ್ಲಾಕಡೆ ಫುಲ್ಲಾಗವ್ರೆ, ಬರ್ತ್ನಾಟ್ಯಾ ಮಾಡ್ಕಂಡು' ಎಂದು ತನ್ನ ದೇಶಪ್ರೇಮ ತೋರಿಸಿ, ಅದು ಕೊನೆಯ ಹಂತವೆಂದು ಸುಮ್ಮನಾದ.

ಸಾಹುಕಾರರಿಗೆ ಈ ಒಂದು ಮೀಟಿಂಗೇ ಸಾಕೆನಿಸಿದರೂ ಗುಂಡನ ಸಮಾಧಾನಕ್ಕಾಗಿ 'ಸ್ವಲ್ಪ ಟೈಂ ತೊಗೊಳಿ, ಪರವಾಗಿಲ್ಲ ಯಾವುದಾದರೂ ಒಳ್ಳೆಯ ಪ್ರಾಜೆಕ್ಟ್ ಯೋಚಿಸಿ, ವಿವರಗಳೊಡನೆ ಬನ್ನಿ' ಎಂದು ಹೇಳಿ ಟೀ ಬಿಸ್ಕೆಟ್ಟುಗಳನ್ನು ಇತ್ತು ಬೀಳ್ಕೊಟ್ಟರು.

'ಛೆ!... ಯಾಲಕ್ಕಿಯಂತಹ ಕನ್ಸಲ್ಟೆಂಟ್ ಪಕ್ಕದಲ್ಲಿ ಇಲ್ಲದೇ ಹೋದನಲ್ಲಾ! ಅಲ್ಲ, ಬೇಕಾರೆ ಒಂದೋ ಎಲ್ಡೋ ಪರಸೆಂಟು ಎಚ್ಗೆ ಬಡ್ಡಿ ಆಕ್ಕಳ್ಳಿ... ಅದು ಬುಟ್ಟು ಈ ಜುಗ್ಗ ನನ್ನಗಾ ಏನೇನೋ 'ಟೆಕ್ನಿಕಲ್' ಕೇಳ್ತಾನಲ್ಲಾ! ಎಂದು ಬೇಜಾರು ಮಾಡಿಕೊಂಡು ನಡೆದಿದ್ದ ಗುಂಡೇಶ ಬಾರಿನತ್ತ. ಒಂದು ಗಂಟೆಯ ನಂತರ ರಸ್ತೆಯಲ್ಲಿ ಹೋಗುತ್ತಿದ್ದ ಶಿವಾಜಿ(ಗಳು!) ಬಾರಿನ ಕಿಟಕಿಯಾಚೆ ಕಂಡ(ರು). ಅವನ(ರ)ನ್ನು ಓಡಿಹೋಗಿ ಹಿಡಿದು ತನ್ನ ಮನಸಿನ ಬೇಗುದಿ ತೋಡಿಕೊಂಡನಂತೆ:

'ಗುಂಡಿಲ್ಲ, ತುಂಡಿಲ್ಲ...; ಏನಂತೆ ಇವ ಎಸ್ಪೋರ್ಟ್ ಮಾಡಾದು?... ಎಲ್ಲೋ ಬುಲ್ಶೇದಾಸ ಇರಬೇಕು' ಎಂದು ಸಾಂತ್ವನ ಮಾಡಿಕೊಂಡು 'ಸಿವಾಜಿ, ಏನಾರಾ ಕಾಸ್ಯೆತಾ? ಅರ್ಜೆಂಟಾಗಿ ಕಾಲಿ ಜೇಬ್ನಾಗೆ ಬಂದೆ... ಬಾರ್ನೋನಿಗೆ ಬಿಲ್ಲಾಯ್ತದೆ' ಎಂದು ಕೇಳಿ, 'ನಿನ್ನಂತಾ ಬೇವರ್ಸಿತಾವ ಪೈಸಾಸ್ ಎಲ್ಲಿರ್ತದೆ?' ಎಂದು ತಾನೇ ವಾಚು ಬಿಚ್ಚಿಕೊಂಡು ಮರಳಿ ಬಾರಿಗೆ ತೂರಾಡುತ್ತ ನಡೆದ.

ಟೀವಿ ಎಕ್ಸ್‌ಪರ್ಟುಗಳು ವಿವರಗಳನ್ನು ನೈಜವಾಗಿ ನೀಡಿದ್ದರು. ರಂಗಣ್ಣ ತನ್ನ ಕ್ಲಾಸ್‌ಮೇಟನ ಎದೆಗಾರಿಕೆ ಕೇಳಿಯೇ ವಿಸ್ಮಿತನಾದ. ಮುಂದಿನ ಶೂಟಿಂಗ್ ಡೇಟುಗಳು, ಡೈಲಾಗುಗಳು ಮತ್ತಿತರ ವಿವರಗಳನ್ನು ಪಡೆದುಕೊಂಡು ಸಾವ್ಕಾರ್ರ ಕಾರಿನಲ್ಲಿ ಎಲ್ಲರೂ ತಮ್ಮ ತಮ್ಮ ಮನೆ ತಲುಪಿಕೊಂಡರು.



''ಪೇರೆಂಟ್ ಟೀಚರ್ಸ್ ಮೀಟಿಂಗಿಗೆ ನೀನು ಬೇಡ, ಅಮ್ಮಾನೇ ಬರ್ಲಿ ಅಂತಾಳಲ್ಲೋ ನಮ್ರಾಜಿ!''

OWNING A HOME IS

A ONE TIME DECISION.

THAT'S PRECISELY WHY


STATE BANK OF MYSORE

OFFERS THE BEST OPTIONS

IN HOUSING FINANCE.

MY BANK HOUSING FINANCE

Owning a home of your own is no more a dream. Especially when State Bank of Mysore is on your side with its range of Housing Finance Schemes to suit every need of yours. Starting from purchase to construction of new homes to repairs, renovation to extension of existing homes, State Bank of Mysore has the best finance options. What's more. When low processing charges, nominal interest, speedy disbursement of loans and flexible repayment facilities, your search for the best housing finance ends here.




State Bank of Mysore

Head Office : K.G. Road

Bangalore - 560 009

Website : http:/www/mysorebank.com

Driven by customer satisfaction


AMBUTHIR HA
POWER PRIVATE LI TED
2ND FLOOR 21/19, CRAIG PARK ROAD.
M.G.ROAD CROSS. BANGALORE-560 001.INDIA
TEL:91-80-5597616/5599654/5595315.FAX:91-80-5597617
e-mail: suchind@giasbg01.vsnl.net.in

Reg.No.: CPMG/KA/BGW-544/2002

HMT is No. 1 in watches*



Times have changed, but our position remains the same.

At HMT, it has been our constant endeavour to craft world-class watches. Designed to make you feel special. The new range of fabulous watches bears ample testimony to this fact.

Buy an HMT-the No. 1 brand among watches.

hmt
Watches
More than 100 million satisfied customers

*The Economic Times Survey of India's Most Trusted Brands conducted by research agency ORG-MARG
Buy a genuine HMT Watch from an Approved Retail Outlet. Insist on Cash Memo & Guarantee Card.

MASS/HMT/2343-01

Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010. Editor : M. SHIVAKUMAR